₹ 5/-

# ನೇಸರು

## ತಿಂಗಳೋಲೆ

PAGES 20

MAY 2025 Nesaru Tingalole Vol. XLIII - 04

**ಮೈಸೂರು ಅಸೋಸಿಯೇಷನ್ನಿನ ಶತಮಾನೋತ್ಸವದ ವರ್ಷ**

**Mysore Association's Centenary Year (1926 - 2026)**



**ಬೆಳ್ಳಿ ಹಬ್ಬದಲ್ಲಿ ನಮ್ಮೊಡನೆ ಇದ್ದ ಆಳಿದ ಶ್ರೀ ಜಯಚಾಮೇಂದ್ರ ಒಡೆಯರ್ ಅವರು**

ಮೈಸೂರು ಅಸೋಸಿಯೇಷನ್ ಮುಂಬೈ

THE MYSORE ASSOCIATION, BOMBAY

393, Bhau Daji Road, Matunga, Mumbai - 400 019. | Tel.: 2403 7065

Email : mysoreassociation.mumbai@gmail.com

# ಅಸೋಸಿಯೇಷನ್‌ನಲ್ಲಿ ಅಕ್ಷಯ ತೃತೀಯ ದಿನದಂದು ಶ್ರೀ ಗಣಪತಿ ದೇವರ 30ನೇ ಪ್ರತಿಷ್ಠಾಪನಾಚರಣೆ









ಬುಧವಾರ, ಎಪ್ರಿಲ್ 30, 2025 ಸಂಜೆ 5.30ಕ್ಕೆ ಅಕ್ಷಯ ತೃತೀಯ ದಿನದಂದು ಅಸೋಸಿಯೇಶನ್‌ನಲ್ಲಿ ಶ್ರೀ ಗಣಪತಿ ಪ್ರತಿಷ್ಠಾಪನಾ ನಿಮಿತ್ತ ಮಹಾಗಣಪತಿ ಪೂಜೆ ಮತ್ತು ಗಣಹೋಮ ಮಾಡಲಾಯಿತು ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪೂಜಾ ವಿಧಿಗಳಲ್ಲಿ ಪಾಲ್ಗೊಂಡು ಸಂತೋಷಿಸಿದರು. ಶ್ರೀಮತಿ ಪದ್ಮ ಹಾಗು ಶ್ರೀ ರವಿಯವರು ಪೂಜೆ ನೆರವೇರಿಸಿದರು.

ಸಂಪುಟ 43 ಮೇ 2025 ಸಂಚಿಕೆ 5

ಗೌ. ಸಂಪಾದಕರು
**ಡಾ. ಜ್ಯೋತಿ ಸತೀಶ್**

❖ ❖ ❖

ಸಂಪಾದಕ ಮಂಡಳಿ:
**ಡಾ. ಮಂಜುನಾಥ್**
**ಕೆ. ಮಂಜುನಾಥಯ್ಯ**
**ಕೆ. ಕಮಲ**
**ನಾರಾಯಣ ನವಿಲೇಕರ್**
**ಗಣಪತಿ ಶಂಕರಲಿಂಗ**

❖ ❖ ❖

ನೇಸರುವಿನಲ್ಲಿ ಪ್ರಕಟವಾಗುವ ಬರಹಗಳಿಗೆ ಆಯಾ ಲೇಖಕರೇಜವಾಬ್ದಾರರು. ಅಲ್ಲಿ ಮೂಡಿ ಬಂದ ಅಭಿಪ್ರಾಯಗಳಿಗೆ ಸಂಸ್ಥೆಯು ಜವಾಬ್ದಾರಿಯಲ್ಲ.
– ಸಂ.

The views expressed by the contributors in this journal are theirs and not of the Association and the Association is not in anyway responsible for the same.
- Ed.

❖ ❖ ❖

ಸಂಪರ್ಕ ವಿಳಾಸ:
**ನೇಸರು**
ಮೈಸೂರು ಅಸೋಸಿಯೇಷನ್
393, ಭಾವುದಾಜಿರಸ್ತೆ, ಮಾಟುಂಗ
ಮುಂಬಯಿ – 400 019.
✆ 24037065

Email:
mysoreassociation.mumbai@gmail.com
Website:
www.mysoreassociation.in

# ‘ಅಹಂ ಬ್ರಹ್ಮಾಸ್ಮಿ!’



✍ **ಡಾ. ಜ್ಯೋತಿ ಸತೀಶ್**

“ಏನಾದರೂ ಆಗು, ಮೊದಲು ಮಾನವನಾಗು..”
ಎಂದು ಕುವೆಂಪುರವರು ಹಾಡಿ ಕೊಂಡಾಡಿದ ನಾಡಿದು. ಬದುಕು ಎಂಬುದು ನಮಗೆಲ್ಲರಿಗೂ ದೊರೆತ ಬೆಲೆ ಕಟ್ಟಲಾಗದ ಒಂದು ಅಮೂಲ್ಯ ಕಾಣಿಕೆ ಎಂದೇ ಹೇಳಬಹುದು. ತಾಳ್ಮೆ, ಪರೋಪಕಾರ, ಸಹಬಾಳ್ವೆ, ದಯೆ, ಕರುಣೆ ಹೀಗೆ ಮುಂತಾದ ಮೌಲ್ಯಗಳನ್ನು ನಮ್ಮ ಬದುಕಿನಲ್ಲಿ ರೂಢಿಸಿಕೊಳ್ಳುವುದರ ಮೂಲಕ ನಮ್ಮ ಜೀವನವನ್ನು ಸಾರ್ಥಕಪಡಿಸಿಕೊಳ್ಳಬೇಕು. ಇಂದು ಮನುಷ್ಯ ಮನುಷ್ಯರ ನಡುವೆ ಸೇತುವೆಯಾಗಬೇಕಿದ್ದ ಧರ್ಮ ಅವರ ನಡುವಿನ ಬಹುದೊಡ್ಡ ತಡೆ ಗೋಡೆಯಾಗಿ ನಿಂತಿರುವುದು ವಿಪರ್ಯಾಸವೇ ಸರಿ. ಯಾವುದೇ ಧರ್ಮವು ಹಿಂಸೆ, ಅಸೂಯೆ, ಜಗಳ ಮುಂತಾದ ಋಣಾತ್ಮಕ ಅಂಶಗಳನ್ನು ಪ್ರತಿಪಾದಿಸುತ್ತಿಲ್ಲ. ನಮಗೆ ಇಂದು ಬೇಕಾಗಿರೋದು ಮನುಷ್ಯಧರ್ಮ. ಮನುಷ್ಯ–ಮನುಷ್ಯರ ನಡುವಿನ ಸಾಮಾಜಿಕ ಸಂಬಂಧಗಳಲ್ಲಿ ಬಿರುಕು ಮೂಡಿಸುವ ಈ ಧರ್ಮಗಳಿಗಿಂತ ಮಾನವೀಯತೆಯನ್ನೇ ತಳಹದಿಯನ್ನಾಗಿ ಪಡೆದಿರುವ ಮನುಷ್ಯ ಧರ್ಮವೇ ಶ್ರೇಷ್ಠವಾದುದು. ಮನುಷ್ಯರಲ್ಲಿ ಮಾನವೀಯತೆ ಬಹಳ ಮುಖ್ಯವಾಗಿ ಬೇಕು. ಎಲ್ಲ ಜೀವರಾಶಿಗಳಲ್ಲಿ ಮನುಷ್ಯರಿಗೆ ಮಾತ್ರ ತಪ್ಪು ಸರಿ ಅರ್ಥಮಾಡಿಕೊಳ್ಳುವ ವಿವೇಚನಾ ಶಕ್ತಿ ಇದೆ. ಮಾನವರಾಗಿರುವ ನಾವು ಮಾನವೀಯತೆ ರೂಢಿಸಿಕೊಳ್ಳಬೇಕಾಗಿದೆ.

‘ಮನದೊಳ್ ದಯೆಯಿಲ್ಲದವನ ಕಣ್ಣೇಂ ಪುಣ್ಣೇಂ’
ಮನಸ್ಸಿನಲ್ಲಿ ದಯೆ ಇಲ್ಲದವನ ಕಣ್ಣು ಕಣ್ಣೋ ಹುಣ್ಣೋ ಎಂದು ಖ್ಯಾತ ವ್ಯಾಕರಣಕಾರ ಕೇಶಿರಾಜ ಜೀವ ದಯೆದ ಬಗ್ಗೆ ಉದ್ಗರಿಸಿರುವುದನ್ನು ಇಲ್ಲಿ ನೆನೆಯಬಹುದು.

ಅಂದು ಸಮಾಜದಲ್ಲಿದ್ದ ಸಂಘರ್ಷಗಳ ನಿವಾರಣೆಗಾಗಿ ಶಂಕರಾಚಾರ್ಯರು ‘ಅದ್ವೈತ’ ವೆಂಬ ಸರಳ ಸಿದ್ಧಾಂತವನ್ನು ಪ್ರತಿಪಾದಿಸಿದರು. ಇಂದಿನ ಸಮಾನತೆ, ಸಮಾಜವಾದದ ಮೂಲ ಬೀಜವೇ ಅದ್ವೈತ ಸಿದ್ಧಾಂತ. ಅದ್ವೈತವೆಂದರೆ ಎರಡಲ್ಲದ್ದು, ಒಂದೇ ಎನ್ನುವ ತತ್ವ. ಪರಮಾತ್ಮ ಮತ್ತು ನಾನು ಬೇರೆ ಬೇರೆಯಲ್ಲ ಎರಡೂ ಒಂದೇ ಎನ್ನುವುದನ್ನು ಶಂಕರಾಚಾರ್ಯರು ಮಂಡಿಸಿದರು. ಪರಮ ‘ಆತ್ಮ’ನಾದ ಭಗವಂತನ ಒಂದು ಅಂಶವೇ ನಾನು. ಇವತ್ತು ಈ ದೇಹ, ನಾಳೆ ಸೇರಿಕೊಳ್ಳುವುದು ಭಗವಂತನಲ್ಲಿ. ದೇಹದ ಸಾವಿನೊಂದಿಗೆ ಆತ್ಮ ಪುನಃ ಪರಮಾತ್ಮನನ್ನೇ ಸೇರುತ್ತದೆ. ಹಾಗಾಗಿ ‘ಪರಮಾತ್ಮ ಮತ್ತು ನಾನು’ ಎರಡೂ ವಿಭಿನ್ನವಲ್ಲ. ಎರಡೂ ಒಂದೇ. ಇದೇ ‘ಅದ್ವೈತ’ ಸಿದ್ಧಾಂತ. ಪರಮಾತ್ಮನ ಅಂಶವೇ ನಾನಾದ ಮೇಲೆ, ನಾನು ‘ಅಹಂ ಬ್ರಹ್ಮಾಸ್ಮಿ!’ ನಾನು ಮಾತ್ರ ಅಲ್ಲ ನೀನು ಬ್ರಹ್ಮ. ಎಲ್ಲರೂ ಬ್ರಹ್ಮರೇ! ಒಟ್ಟಾರೆ ಹೇಳುವುದಾದರೆ ಎಲ್ಲರೂ ಸಮಾನರು ಎನ್ನುವ ಕ್ರಾಂತಿಕಾರಿ ನಿಲುವನ್ನು ಶಂಕರಾಚಾರ್ಯರು ಪ್ರತಿಪಾದಿಸಿದರು. ಈ ನಿಲುವಿನಿಂದಾಗಿ ಅಸಮಾನತೆಗೆ, ಅನ್ಯಾಯಕ್ಕೆ, ತುಳಿತಕ್ಕೆ, ಮೇಲು–ಕೀಳೆಂಬ ತಾರತಮ್ಯಕ್ಕೆ ಎಡೆಯಿಲ್ಲದಂತಾಯಿತು. ಎಲ್ಲರೂ ಪರಮಾತ್ಮನ ಒಂದು ಅಂಶವೆಂದ ಮೇಲೆ ಇನ್ನೆಲ್ಲಿಯ ಅಸ್ಪ್ರಶ್ಯತೆ?.

‘ದಯೆಯೇ ಧರ್ಮದ ಮೂಲವಯ್ಯ’. ಮಾನವ ಜನ್ಮದೊಡ್ಡದಲ್ಲ. ಮಾನವೀಯತೆ ದೊಡ್ಡದು. ಧರ್ಮ ದೊಡ್ಡದಲ್ಲ. ದಯೆಯೇ ದೊಡ್ಡದು ಎಂದು ಸಾರಿ ಹೇಳಿದರು ಬಸವಣ್ಣನವರು. ಇಂತಹ ಹಿರಿಯರು ಹಾಕಿಕೊಟ್ಟ ಆದರ್ಶ ಜೀವನದ ಹಾದಿಯನ್ನು ಕೆಲವರು ಮರೆತಿದ್ದಾರೆ. ಧರ್ಮದ ಹೆಸರಿನಲ್ಲಿ ಇಂದು ಕೆಲವರು ಮಾಡುತ್ತಿರುವ ಅಮಾನವೀಯ ಕೃತ್ಯವನ್ನು ಗಮನಿಸಿದಾಗ, ಇವರೆಲ್ಲರೂ ನಿಜವಾಗಲೂ ಮನುಷ್ಯರೇ ಅನ್ನುವ ಸಂದೇಹ ಉಂಟಾಗುತ್ತದೆ. ಇವರಿಗೆ ಆತ್ಮಸಾಕ್ಷಿ ಅನ್ನುವುದೇ ಇಲ್ಲವೇ? ಇಷ್ಟು ದೊಡ್ಡ ಮಹಾಪಾಪ ಮಾಡಿದ ಮೇಲೆ, ಇವರ ಕಣ್ಣುಗಳಿಗೆ ನಿದ್ದೆಯಾದರೂ ಹೇಗೆ ಬರುತ್ತದೆ?. ಹುಟ್ಟಿದವನು ಸಾಯಲೇಬೇಕು. ಯಾರೂ ಶಾಶ್ವತರಲ್ಲ. ಇರುವಷ್ಟು ದಿನ ಪ್ರೀತಿಯಿಂದ ಶಾಂತ ಚಿತ್ತದಿಂದ ಬದುಕಬೇಕು. ತಾನೂ ಬದುಕಬೇಕು, ಇನ್ನೊಬ್ಬರನ್ನು ಬದುಕ ಬಿಡಬೇಕು ಅನ್ನುವುದು ಇವರಿಗೆಲ್ಲ ಯಾಕೆ ತಿಳಿಯುತ್ತಿಲ್ಲ. ಇತ್ತೀಚೆಗೆ ನಡೆದ ಪಹಲ್ಗಾಮ್ ನಲ್ಲಿ ನಡೆದ ಘಟನೆ ಇಡೀ ದೇಶವನ್ನೇ ಬೆಚ್ಚಿ ಬೀಳಿಸಿದೆ. ಇಂತಹ ಪೈಶಾಚಿಕ ಕೃತ್ಯವನ್ನು ಎಸಗಿದವರಿಗೆ ಸರಿಯಾದ ಶಿಕ್ಷೆಯಾಗಬೇಕು. ಆಗ ಮಾತ್ರ ಇದರಲ್ಲಿ ಅನ್ಯಾಯಕ್ಕೆ ಒಳಪಟ್ಟ ಕುಟುಂಬಸ್ಥರಿಗೆ ಸ್ವಲ್ಪ ಮಟ್ಟಿಗಾದರೂ ಶಾಂತಿ ಸಿಕ್ಕೀತು.

# ರಾಮಾಯಣ ಮೊದಲೋ ಮಹಾಭಾರತ ಮೊದಲೋ



✍ ಡಾ. ಮಂಜುನಾಥ್

ನಮಗೆ ಹಿಂದಿನಿಂದಲೂ ರಾಮಾಯಣ ಮೊದಲು ನಡೆದಿದ್ದು, ಆಮೇಲೆ ಮಹಾಭಾರತ ಎಂದು ಹಿರಿಯರೆಲ್ಲರೂ ಹೇಳಿಕೊಟ್ಟಿದ್ದಾರೆ. ಆದರೆ ಇದು ಸರಿಯೇ? ಗುರು ಹಿರಿಯರು ಹೇಳಿ ಕೊಟ್ಟಿದ್ದನ್ನು ಯಾವಾಗಲೂ ಶಿಷ್ಯರು ಒರೆಹಚ್ಚಿ ನೋಡಿ ಅರಿಯಬೇಕು. ಕೇಳಿದ್ದು ಎಷ್ಟು ಸರಿ ಎನ್ನುವುದನ್ನು ನಾವೆಲ್ಲರೂ ತಿಳಿಯಬೇಕು.

ಈಗ ನಾವು ಸಾಮಾಜಿಕವಾಗಿ ಭೌಗೋಳಿಕವಾಗಿ ಹಾಗೆಯೇ ಇತಿಹಾಸ ಪೂರ್ವಕವಾಗಿ ನೆನೆಯಬೇಕು.

1. ರಾಮಾಯಣದ ಬಾಲಕಾಂಡದಲ್ಲಿ ವಿಶ್ವಾಮಿತ್ರನ ಉಲ್ಲೇಖ ಬರುತ್ತದೆ. ವಿಶ್ವಾಮಿತ್ರ ತನ್ನ ಯಾಗ ಯಜ್ಞಗಳನ್ನು ಕಾಪಾಡಲು ಕ್ಷತ್ರಿಯ ಕುಮಾರರನ್ನು ಹುಡುಕುತ್ತಿರುತ್ತಾನೆ. ಆತ ದಶರಥನ ಬಳಿಗೆ ಬಂದು ನೀನು ನಿನ್ನ ಮಕ್ಕಳು, ರಾಮ ಲಕ್ಷ್ಮಣರನ್ನು ನನ್ನ ಜೊತೆ ಕಳಿಸು ಎಂದು ಕೇಳುತ್ತಾನೆ. ದಶರಥನಿಗೆ ಒಪ್ಪಿಗೆ ಇಲ್ಲ. ಆಗ ವಸಿಷ್ಠ ರಾಜಗುರು, ದಶರಥನಿಗೆ ವಿಶ್ವಾಮಿತ್ರನ ಕಥೆಯನ್ನು ಹೇಳುತ್ತಾನೆ. ಹೇಗೆ ಈ ಕ್ಷತ್ರಿಯ ರಾಜ, ತನ್ನ ಆಶ್ರಮಕ್ಕೆ ಬಂದು ನಂದಿನಿಯನ್ನು ನೋಡಿ ಮರುಳಾದ. ಆದರೆ ಬ್ರಹ್ಮ ಜ್ಞಾನದ ಬಲವೇ ಹೆಚ್ಚಿನದು ಎಂದು ತಿಳಿದು ತಪಸ್ಸು ಮಾಡಲು ತೊಡಗುತ್ತಾನೆ. ಮೊದಲು ರಾಜರ್ಷಿಯಾಗಿ ನಂತರ ಮಹರ್ಷಿಯಾಗಿ ಆಮೇಲೆ ಬ್ರಹ್ಮರ್ಷಿಯಾಗುತ್ತಾನೆ. ಇಂತಹನೊಡನೆ ಖಂಡಿತಾ ನಿನ್ನ ಮಕ್ಕಳನ್ನು ಕಳಿಸು ಎಂದು ದಶರಥನಿಗೆ ಹೇಳುತ್ತಾನೆ.

ಈಗ ವಿಶ್ವಾಮಿತ್ರ ಮಹಾಭಾರತದಲ್ಲಿಯೂ ಬರುತ್ತಾನೆ. ಆತ ರಾಜರ್ಷಿಯಾಗಿ, ಮಹರ್ಷಿಯಾಗಿ ತಪಸ್ಸನ್ನು ಮಾಡುತ್ತಿರುವಾಗ ಇಂದ್ರ ಅವನ ತಪಸ್ಸನ್ನು ಕೆಡಿಸಲು ಅಪ್ಸರೆ, ಮೇನಕೆಯನ್ನು ಕಳಿಸುತ್ತಾನೆ. ಆಗ ವಿಶ್ವಾಮಿತ್ರ ಅವಳ ರೂಪಕ್ಕೆ ಬೆರಗಾಗಿ ತನ್ನ ತಪಸ್ಸನ್ನು ಬಿಡುತ್ತಾನೆ. ಆಗ ಮೇನಕೆಯಿಂದ ಅವನಿಗೆ ಶಕುಂತಲಾ ಹುಟ್ಟುತ್ತಾಳೆ. ಶಕುಂತಲೆ ಕಣ್ವ ಮುನಿಯ ಆಶ್ರಮದಲ್ಲಿರುವಾಗ ದೊರೆ ದುಶ್ಯಂತ ಅವಳನ್ನು ಮೋಹಗೊಳಿಸುತ್ತಾನೆ. ಅವಳಿಗೆ ಹುಟ್ಟಿದ ಮಗ ಸರ್ವದಮನ ಕುರುವಂಶದ ಭರತನಾದ. ಈತನೇ ಕುರುವಂಶದ ಪೂರ್ವಜ.

ವಿಶ್ವಾಮಿತ್ರ ಮುಂದೆ ತಪಸ್ಸು ಮಾಡಿ, ಮಹರ್ಷಿಯಾಗಿ ಆನಂತರ ಬ್ರಹ್ಮರ್ಷಿಯಾಗಿ ವಸಿಷ್ಠನ ಕೈಲಿ ಸೈ ಎನಿಸಿಕೊಳ್ಳುತ್ತಾನೆ. ಅಂದರೆ ಭರತನೇ ದಶರಥನಿಗಿಂತ ಬಹಳ ಹಳಬ ಎಂದಾಯ್ತು.

2. ಈಗ ಭೌಗೋಳಿಕವಾಗಿ ನೋಡೋಣ.... ಮಹಾಭಾರತ ನಡೆಯುವುದೆಲ್ಲಾ ಇಂದ್ರಪ್ರಸ್ಥ (ದೆಹಲಿ) ಹಾಗೂ ಹಸ್ತಿನಾವತಿಯಲ್ಲಿಯೇ. ಇವರಿಗೆ ಗಾಂಧಾರ ಸಿಂಧು ಪ್ರಾಂತ್ಯದ ನಂಟಿತ್ತು. ಮಹಾಭಾರತದಲ್ಲಿ ಕೌರವ–ಪಾಂಡವರೊಡನೆ ಸಂಧಾನ ಮಾಡಲು ಹೋದ ಕೃಷ್ಣ, ದ್ವಾರಕೆಗೆ ಹಿಂತಿರುಗಿ ಬರುವಾಗ ಸರಸ್ವತಿ ನದಿಯ ದಂಡೆಯಲ್ಲಿಯೇ ರಥವನ್ನು ಕೊಂಡು ಬರುತ್ತಾನೆ. ಅಂದರೆ ಈ ಕಾಲದಲ್ಲಿ ಸರಸ್ವತಿ ನದಿ ಇನ್ನೂ ಹರಿಯುತ್ತಿತ್ತು ಎಂದಾಯ್ತು. ಸರಸ್ವತಿ ನದಿ ಬತ್ತಿ ಹೋದಾಗ ಅದರ ಮುಕುಟ ಭೂಮಿಯಲ್ಲಿದ್ದ ದ್ವಾರಕೆಯೂ ಮುಳುಗಿ ಹೋಯಿತು. ರಾಮಾಯಣ ಕಾಲದಲ್ಲಿ ಸರಸ್ವತಿ ನದಿ ಮಾಯವಾಗಿತ್ತು. ಅದನ್ನು ಗುಪ್ತಗಾಮಿನಿ ಎಂದು ಪ್ರಯಾಗದಲ್ಲಿ ಪರಿಗಣಿಸುತ್ತಿದ್ದರು.

ಕುರುಕ್ಷೇತ್ರವೂ ಕೂಡ ಪಶ್ಚಿಮದಲ್ಲಿಯೇ ಇತ್ತು. ಮಹಾಭಾರತ ಕಾಲದಲ್ಲಿ ವಿಂಧ್ಯ ಪರ್ವತಕ್ಕೆ ದಕ್ಷಿಣದಲ್ಲಿ ಯಾವ ಉಲ್ಲೇಖವೂ ಇಲ್ಲ. ಯಾರೂ ದಕ್ಷಿಣಕ್ಕೆ ಬರುವುದೇ ಇಲ್ಲ.

ರಾಮಾಯಣದಲ್ಲಿ, ವಿಂಧ್ಯಪರ್ವತವನ್ನು ದಾಟಿ ಸಾಗರವನ್ನೂ ದಾಟಿ ಲಂಕೆಗೆ ಶ್ರೀರಾಮ ಬರುತ್ತಾನೆ. ದಕ್ಷಿಣದಲ್ಲಿದ್ದವರನ್ನೆಲ್ಲಾ, 'ವನ–ನರ' – 'ವಾನರ' ಎಂದು ಕರೆಯುತ್ತಾರೆ.

ಹೀಗಿದ್ದಾಗ ಭೌಗೋಲಿಕವಾಗಿ, ಮಹಾಭಾರತವೇ ಮೊದಲಾಗುತ್ತದೆ.

3. ಆಮೇಲೆ ಸಾಮಾಜಿಕವಾಗಿ ನೋಡೋಣ. ಮಹಾಭಾರತದಲ್ಲಿ ತಮಗೆ ಮಕ್ಕಳಿಲ್ಲದಾಗ, ತನ್ನ ಸತಿಯರು ಬೇರೆ ಪುರುಷರಿಂದ ಮಕ್ಕಳನ್ನು ಪಡೆಯಲು ಒಪ್ಪಿಗೆ ನೀಡುತ್ತಿದ್ದರು. ಮಹಾಭಾರತದುದ್ದಕ್ಕೂ ಈ 'ನಿಯೋಗ'ದ ಪದ್ಧತಿಯನ್ನು ನಾವು ನೋಡುತ್ತೇವೆ. ಆದರೆ ರಾಮಾಯಣದಲ್ಲಿ ಇದರ ಉಲ್ಲೇಖವೇ ಇಲ್ಲ. ಮಕ್ಕಳಿಲ್ಲದಾಗ ಪುತ್ರ ಕಾಮೇಕ್ಷಿ ಯಾಗವನ್ನು ಮಾಡಿ ಧನ್ವಂತರಿಯಿಂದ ಔಷಧ ಪಡೆಯುವುದನ್ನು ನೋಡುತ್ತೇವೆ.

ಮಹಾಭಾರತದಲ್ಲಿ ಒಬ್ಬಳೇ ಹೆಣ್ಣನ್ನು ಐದು ಮಂದಿ ಅಣ್ಣ ತಮ್ಮಂದಿರು ಮದುವೆಯಾಗುತ್ತಾರೆ. ತಮ್ಮಂದಿರು ಸತ್ತಾಗ, ಅತ್ತೆಯಾದ ಸತ್ಯವತಿ ತನ್ನ ಮೊಟ್ಟಮೊದಲಿನ ಮಗ ವ್ಯಾಸನಿಗೆ ತಮ್ಮಂದಿರ ಹೆಂಡತಿಯರಿಂದ ಮಕ್ಕಳನ್ನು ಪಡೆಯಲು ಆಜ್ಞೆ ಮಾಡುತ್ತಾಳೆ.

ಇಂತಹ ಉಲ್ಲೇಖ ರಾಮಾಯಣದಲ್ಲಿ ಇಲ್ಲವೇ ಇಲ್ಲ.

ಇನ್ನು ವೈಷ್ಣವ ಪುರಾಣಗಳಿಂದ ಯುಗಗಳ ಗಣನೆ

| | | |
|---|---|---|
| ಮೊಟ್ಟಮೊದಲು | – | ಕೃತ್ಯಯುಗ |
| ಆನಂತರ | – | ತ್ರೇತಾಯುಗ |
| ನಂತರ | – | ದ್ವಾಪರಯುಗ |
| ಇನ್ನು | – | ಕಲಿಯುಗ |

ಎಂದು ಸಾರುತ್ತಾರೆ. ಇದು ಎಷ್ಟು ದಿಟ. 'ತ್ರೇ' ಎಂದರೆ ಮೂರು 'ದ್ವಾ' ಎಂದರೆ ಎರಡು. ದ್ವಾಪರಯುಗವೇ ಎರಡನೆಯದು, ತ್ರೇತಾಯುಗ ಮೂರನೆಯದು. ಇಲ್ಲವೆಂದರೆ ಸಂಸ್ಕೃತವೇ ಸುಳ್ಳು. ಎಣಿಕೆ ಹಾಕುವುದಕ್ಕೆ ನಮಗೆ ಹೇಳಿ ಕೊಡುವುದೇ ಸರಿಯಿಲ್ಲ ಎಂದರೆ ಹೇಗೆ ಒಂದರ ಮೇಲೆ ಎರಡು, ಎರಡಾದ ಮೇಲೆ ಮೂರು.

ಮೊದಲು ಪರಶುರಾಮ, ಆಮೇಲೆ ರಾಮ, ಆಮೇಲೆ ಕೃಷ್ಣ ಇರಬೇಕು ಎಂಬ ಎಣಿಕೆಯಲ್ಲಿ ತ್ರೇತಾಯುಗವನ್ನು ಮೊದಲು ಮಾಡಿ ಆನಂತರದಲ್ಲಿ ದ್ವಾಪರಯುಗ ಮಾಡಿದವರಿಗೆ ತಲೆ ಸರಿ ಇರಲಿಲ್ಲ.

ಹೀಗೆ ನೋಡಿದಾಗ ರಾಮಾಯಣ ಆಮೇಲೆ ಮಹಾಭಾರತವೇ ಮೊದಲು ಎಂದು ಕಾಣುತ್ತದೆ. ●

# ಅಠಾರಾ ಕಚೇರಿ



ಬೆಂಗಳೂರಿನ ಈಗಿನ ಉಚ್ಚ ನ್ಯಾಯಾಲಯ ಇರುವ ಹಳೆಯ, ಸುಂದರ ಕೆಂಪು ಕಟ್ಟಡವನ್ನು ಅಠಾರಾ ಕಚೇರಿ ಎಂದು ಕರೆಯುವುದುಂಟು. ಈ ಹೆಸರು ಯಾಕೆ ಬಂತು ಎಂದು ಗೊತ್ತಿದೆಯೇ?

ಮೈಸೂರು ಒಡೆಯರ್ ಮನೆತನದ ಪ್ರಸಿದ್ಧ ರಾಜರುಗಳಲ್ಲಿ ಚಿಕ್ಕದೇವರಾಜ ಒಡೆಯರ್ ಒಬ್ಬರು. ಇವರು ಆಡಳಿತ ಕಾಲದಲ್ಲಿ ಅನೇಕ ಸುಧಾರಣೆಗಳನ್ನು ತಂದರು. ಅದರಲ್ಲಿ ಒಂದು ಎಂದರೆ ರಾಜ್ಯದ ಆಡಳಿತವನ್ನು ಈ ಕೆಳಕಂಡ 18 ಇಲಾಖೆಗಳಲ್ಲಿ ವಿಂಗಡಿಸಿ ಅಚ್ಚುಕಟ್ಟು ಮಾಡಿದ್ದು.

**1. ನಿರೂಪ ಚಾವಡಿ:** ಇದು ಪ್ರಜೆಗಳು ಸರಕಾರಕ್ಕೆ ಬೇರೆ ಬೇರೆ ಕಾರಣಗಳಿಗಾಗಿ ಸಲ್ಲಿಸಿದ ಅರ್ಜಿಗಳನ್ನು ಸ್ವೀಕರಿಸಿ ಅವುಗಳನ್ನು ಸೂಕ್ತ ವಿಲೇವಾರಿ ಮಾಡುವ ಇಲಾಖೆ.

**2. ಆಯಕಟ್ಟು ಚಾವಡಿ:** ಮೈಸೂರು ಸಂಸ್ಥಾನವನ್ನು ಆಡಳಿತದ ಅನುಕೂಲಕ್ಕಾಗಿ 84 ಆಡಳಿತಾತ್ಮಕ ಘಟಕಗಳನ್ನಾಗಿ ವಿಭಜಿಸಲಾಗಿತ್ತು. ಈ ಎಲ್ಲ ಘಟಕಗಳ ಒಟ್ಟು ಸಾರ್ವಜನಿಕ ಹಾಗೂ ಸೈನ್ಯದ ಹಣಕಾಸು ಲೆಕ್ಕಪತ್ರಗಳನ್ನು ನೋಡಿಕೊಳ್ಳುವ ಇಲಾಖೆ.

**3. ಮೈಸೂರು ಹೋಬಳಿ ವಿಚಾರದ ಚಾವಡಿ:** ಮೈಸೂರು ಸಂಸ್ಥಾನವನ್ನು ಎರಡು ಭಾಗವಾಗಿ ವಿಭಾಗಿಸಲಾಗಿತ್ತು ಒಂದು ಪಟ್ಟಣ ಹೋಬಳಿ (ಕಾವೇರಿ ನದಿಯ ಉತ್ತರ ಭಾಗದ ಪ್ರದೇಶ) ಹಾಗೂ ಮೈಸೂರು ಹೋಬಳಿ (ಕಾವೇರಿ ನದಿಯ ದಕ್ಷಿಣ ಭಾಗದ ಪ್ರದೇಶ). ಮೈಸೂರು ಹೋಬಳಿ ವಿಚಾರದ ಚಾವಡಿಯು ಮೈಸೂರು ಹೋಬಳಿಯ ಆಡಳಿತವನ್ನು ನೋಡಿಕೊಳ್ಳುತ್ತಿತ್ತು.

**4. ಪಟ್ಟಣದ ಹೋಬಳಿ ವಿಚಾರದ ಚಾವಡಿ:** ಇದು ಮೇಲಿನಂತೆ ಪಟ್ಟಣದ ಹೋಬಳಿಯ ಆಡಳಿತವನ್ನು ನೋಡಿಕೊಳ್ಳುತ್ತಿತ್ತು.

**5. ಸೀಮೆಯ ಕಂದಾಚಾರ:** ಎಲ್ಲಾ ಘಟಕಗಳ ಸಾರ್ವಜನಿಕ ಹಾಗೂ ಸೈನಿಕ ವಿಭಾಗಗಳ ಆಯುಧಗಳು, ಮದ್ದುಗುಂಡುಗಳು ಹಾಗೂ ಗೋದಾಮುಗಳ ವಿವರವಾದ ಲೆಕ್ಕಪತ್ರಗಳನ್ನು ನೋಡಿಕೊಳ್ಳುತ್ತಿದ್ದ ಇಲಾಖೆ.

**6. ಬಾಗಿಲ ಕಂದಾಚಾರ:** ಇದು ರಾಜಧಾನಿಯಲ್ಲಿ ಇದ್ದ ಸೈನ್ಯದ ತುಕಡಿಗಳ ಲೆಕ್ಕಪತ್ರಗಳನ್ನು ನೋಡಿಕೊಳ್ಳುತ್ತಿದ್ದ ಇಲಾಖೆ.

**7. ಸುಂಕದ ಚಾವಡಿ:** ರಸ್ತೆ ಸುಂಕ, ಆಯಾತ ನಿರ್ಯಾತದ ಸುಂಕಗಳು ಇತ್ಯಾದಿ ಮೈಸೂರು ಸಂಸ್ಥಾನದ ಒಳಗೆ ವಿಧಿಸುತ್ತಿದ್ದ ಸುಂಕದ ಇಲಾಖೆ.

**8. ಪೋಂ ಚಾವಡಿ:** ಪೋಂ ಅಂದರೆ ಒಂದು ವಿಧವಾದ ತೆರಿಗೆಯಾಗಿದ್ದು, ಸುಂಕ ವಿಧಿಸಲಾಗುತ್ತಿದ್ದ ತಾಲೂಕುಗಳಲ್ಲಿ, ಅದರ ಜೊತೆಗೆ ಹೆಚ್ಚುವರಿಯಾಗಿ ಅದರ ಅರ್ಧದಷ್ಟು ಪ್ರಮಾಣದಲ್ಲಿ ಈ ಪೋಂ ಎನ್ನುವ ಕರವನ್ನು ಬ್ರಾಹ್ಮಣರು ಅಧಿಕಾರಿಗಳು ಇತ್ಯಾದಿ ಕೆಲವು ಪ್ರಜೆಗಳಿಗೆ ವಿಧಿಸಲಾಗುತ್ತಿತ್ತು.

**9. ತುಂಡೆಯ / ತೋಡಯ ಚಾವಡಿ:** ಇದು ಒಂದು ಕರವಸೂಲಿ ವಿಭಾಗವಾಗಿದ್ದು, ರಾಜಧಾನಿಯಾದ ಶ್ರೀರಂಗಪಟ್ಟಣದಲ್ಲಿ ಒಟ್ಟು ಸುಂಕದ ಕಾಲು ಭಾಗವನ್ನು ವಸೂಲಿ ಮಾಡಲಾಗುತ್ತಿತ್ತು.

**10. ಉಭೈಕ ವಿಚಾರ ಚಾವಡಿ:** ಈ ವಿಭಾಗಕ್ಕೆ ಎರಡು ಜವಾಬ್ದಾರಿಗಳು ಇದ್ದವು. ಒಂದು ಮೈಸೂರು ಹಾಗೂ ಇನ್ನೊಂದು ಶ್ರೀರಂಗಪಟ್ಟಣ. ಇದರಲ್ಲಿ ಒಂದು ಮೈಸೂರು ಹೋಬಳಿ ಅಷ್ಟಗ್ರಾಮದ ಚಾವಡಿ ಎಂಬ ಮೈಸೂರಿನ ದೇವನಾಲಾ ಎಂಬ ಕಾಲುವೆಗಳ ಅಧೀನದಲ್ಲಿ ರಚಿಸಿದ ಹೊಸ ಎಂಟು ಹೋಬಳಿಗಳ ಜವಾಬ್ದಾರಿ ಇದ್ದ ಇಲಾಖೆ.

**11. ಉಭೈಕ ವಿಚಾರ ಚಾವಡಿ:** ಹೀಗೆಯೇ ಪಟ್ಟಣದ ಹೋಬಳಿ ಅಷ್ಟಗ್ರಾಮದ ಚಾವಡಿ ಎಂಬುದು ಶ್ರೀರಂಗಪಟ್ಟಣದ ಚಿಕ್ಕದೇವರಾಜ ಸಾಗರ ಕಾಲುವೆಯ ಅಧೀನದಲ್ಲಿ ರಚಿಸಲಾದ ಎಂಟು ಹೋಬಳಿಗಳ ಜವಾಬ್ದಾರಿ ಇದ್ದ ಇಲಾಖೆ.

ಈ ಎರಡು ಇಲಾಖೆಗಳಿಗೆ ಕಾವೇರಿ ಮತ್ತು ಹೇಮಾವತಿ ನದಿಗಳಿಗೆ ಕಟ್ಟಿದ ಆಣೆಕಟ್ಟು ಮತ್ತು ಕಾಲುವೆಗಳ ರಿಪೇರಿಯ ಜವಾಬ್ದಾರಿಯೂ ಇದ್ದು, ಈ ಕಾಲುವೆಗಳ ನೀರಾವರಿಯಿಂದ ಬಂದ ಕೃಷಿ ಉತ್ಪನ್ನದ ಸರಕಾರದ ಪಾಲಿನ ಲೆಕ್ಕಪತ್ರಗಳು ಕೂಡ ಈ ವಿಭಾಗ ನೋಡಿಕೊಳ್ಳುತ್ತಿತ್ತು.

**12. ಬೆಣ್ಣೆ ಚಾವಡಿ :** ಇದು ಪಶುಸಂಗೋಪನಾ ಇಲಾಖೆ. ಇದನ್ನು ಮುಂದೆ ಟಿಪ್ಪು ಸುಲ್ತಾನ್ ಕಾಲದಲ್ಲಿ ಅಮೃತ ಮಹಲ್ ಎಂದು ಹೆಸರು ಬದಲಾಯಿಸಲಾಯಿತು. ರಾಜ್ಯದ ದನ, ಕರುಗಳ ಸಂತತಿಯನ್ನು ಬೆಳೆಸಿ, ಮೈಸೂರು ಅರಮನೆಗೆ ಹಾಗೂ ಇತರರಿಗೆ ಹಾಲು, ಮೊಸರು ಬೆಣ್ಣೆ ಇವುಗಳ ಸರಬರಾಜು ಈ ಇಲಾಖೆಯ ಜವಾಬ್ದಾರಿಯಾಗಿತ್ತು.

**13. ಪಟ್ಟದ ಚಾವಡಿ :** ಕೋಟೆ ಕೊತ್ತಲಗಳ, ಅರಮನೆಗಳ ಹಾಗೂ ಇತರ ಸಾರ್ವಜನಿಕ ಕಟ್ಟಡಗಳ ರಿಪೇರಿಯ ಜವಾಬ್ದಾರಿ ಇಲಾಖೆಗೆ ಇತ್ತು

**14. ಬೇಹಿನ ಚಾವಡಿ :** ಇದು ಅಂಚೆ ಹಾಗೂ ಗುಪ್ತಚರ ವಿಭಾಗ. ಹರಿಕಾರರ ಮೂಲಕಶ್ರೀರಂಗಪಟ್ಟಣ ಹಾಗೂ ರಾಜ್ಯದಾದ್ಯಂತ ಕಳುಹಿಸಲಾಗುತ್ತಿದ್ದ ಅಂಚೆ ಹಾಗೂ ರಾಜ ನಿರೂಪಗಳನ್ನು ಪ್ರಜೆಗಳಿಗೆ ತ್ವರಿತವಾಗಿ ಕಳಿಸುವ ಜವಾಬ್ದಾರಿ ಇದ್ದ ಇಲಾಖೆ.

**15. ಸಮ್ಮುಖದ ಚಾವಡಿ :** ಇದು ಅರಮನೆಯ ಅಧಿಕಾರಿಗಳು, ಒಳಮನೆಯ ಸಿಬ್ಬಂದಿಗಳು, ಖಾಸಗಿ ಕೆಲಸದವರು ಇತ್ಯಾದಿಗಳ ವಹಿವಾಟನ್ನು ನೋಡಿಕೊಳ್ಳುವ ಇಲಾಖೆ. ಇದರ ಮುಖ್ಯಸ್ಥರು ನೇರವಾಗಿ ಮೈಸೂರು ಮಹಾರಾಜರ ಅಧೀನದಲ್ಲಿದ್ದರು

**16. ದೇವಸ್ಥಾನದ ಚಾವಡಿ :** ಈ ಇಲಾಖೆಯ ಜವಾಬ್ದಾರಿ ದೈನಂದಿನ ದೇವಸ್ಥಾನಗಳ ಉಂಬಳಿ, ಬ್ರಾಹ್ಮಣರು, ಅರ್ಚಕರುಗಳ ಸಂಭಾವನೆ ಇತ್ಯಾದಿಗಳ ಲೆಕ್ಕವನ್ನು ಇಡುವುದು, ಹೊಸ ದೇವಾಲಯಗಳ ನಿರ್ಮಾಣ, ಇರುವ ದೇವಸ್ಥಾನಗಳ ರಿಪೇರಿ ಹಾಗೂ ಇತರ ಧಾರ್ಮಿಕ ಚಟುವಟಿಕೆಗಳ ಮೇಲುಸ್ತುವಾರಿ.

**17. ಕಬ್ಬಿಣದ ಚಾವಡಿ :** ಈ ಇಲಾಖೆಯು ಕಬ್ಬಿಣದ ಅದುರನ್ನು ಕೊಳ್ಳುವುದು, ಅದರಿಂದ ಕಬ್ಬಿಣವನ್ನು ತಯಾರುಮಾಡಿ ಮಾರುವುದು ಇವುಗಳನ್ನು ನೋಡಿಕೊಳ್ಳುತ್ತಿತ್ತು. ಕಬ್ಬಿಣದ ವಾಣಿಜ್ಯ ಸಂಪೂರ್ಣ ಸರಕಾರದ ಅಧೀನದಲ್ಲಿತ್ತು.

**18. ಹೊಗೆಸೊಪ್ಪಿನ ಚಾವಡಿ :** ಇದು ಹೆಸರೇ ಹೇಳುವಂತೆ ಹೊಗೆ ಸೊಪ್ಪಿಗೆ ಸಂಬಂಧಪಟ್ಟಂತಹ ಇಲಾಖೆ.

ಪ್ರತಿ ಇಲಾಖೆಯೂ ಅದರ ವ್ಯಾಪ್ತಿ ಹಾಗೂ ಮಹತ್ವಕ್ಕೆ ಅನುಗುಣವಾಗಿ, ಬೇರೆ ಬೇರೆ ಮಟ್ಟದ ಅಧಿಕಾರಿಗಳ ಮುಖಂಡತ್ವದಲ್ಲಿ ಇದ್ದರೂ, ಪ್ರತಿಯೊಂದರಲ್ಲೂ ಕನಿಷ್ಠ ಒಬ್ಬ ಗೊತ್ತುಗಾರ (supervisors), ಮೂರು ದಫ್ತರುಗಳು (Record keepers), ಗುಮಾಸ್ತರುಗಳು (accountants), ರಾಯಸದವರು (writers), ದಫೇದಾರ (head peon), ಊಳಿಗದವರು (menials), ಗೊಲ್ಲರು (attendants), ಕಾವಲುಗಾರರು (watchman) ಮತ್ತು ದೀವಿಟಿಗೆಯವರು (torch-bearers) ಇಷ್ಟು ಸಿಬ್ಬಂದಿಗಳು ಇದ್ದರು. ಕೆಲವು ಇಲಾಖೆಗಳಲ್ಲಿ ಅಗತ್ಯ ಬಿದ್ದಂತೆ ಹೆಚ್ಚಿನ ಸಿಬ್ಬಂಧಿಯೂ ಇರುತ್ತಿತ್ತು.

ಈ ಹದಿನೆಂಟು ಇಲಾಖೆಗಳು ರಾಜ್ಯಾಡಳಿತದ ಕಬ್ಬಿಣದ ಚೌಕಟ್ಟುಗಳಾಗಿದ್ದು, ಪ್ರತಿ ಇಲಾಖೆಯ ಕೆಲಸವನ್ನೂ ವಿಷದವಾಗಿ ವಿಂಗಡಿಸಲಾಗಿತು.

1867ರಲ್ಲಿ ಬೆಂಗಳೂರಿನಲ್ಲಿ ಈ ಎರಡು ಅಂತಸ್ತಿನ ಕೆಂಪು ಕಟ್ಟಡವನ್ನು ಕಟ್ಟಿದಾಗ ಆಡಳಿತ ಕೇಂದ್ರವಾದ ಇದನ್ನು ಮೇಲ್ಕಂಡ ಹದಿನೆಂಟು ಇಲಾಖೆಗಳಿದ್ದ ಅಠಾರಾ ಕಚೇರಿ ಎಂದೇ ಕರೆಯಲಾಯಿತು.

**Source :** The book - Splendours of Royal Mysore by Shri. Vikram Sampath


## STATEMENT ABOUT OWNERSHIP AND OTHER PARTICULARS OF NESARU TINGALOLE

1. Place of Publication : Mumbai
2. Perdiodicity of Publication : Monthly
3. Printer's Name : Print Art Corporation
   Citizenship : India
   Address : 321 Bussa Udyog Bhavan, Off T. J. Road, Seweri (W), Mumbai - 400 015.
4. Publisher's Name : Dr. Jyothi Satish
   Citizenship : India
   Address : C/o. The Mysore Association, 393, Bhaudaji Road, Matunga, Mumbai - 400 019.
5. Editor's Name : Dr. Jyothi Satish
   Citizenship : India
   Address : C/o. The Mysore Association, 393, Bhaudaji Road, Matunga, Mumbai - 400 019.
6. Name & Address of
   the Owner of Newspaper : The Mysore Association, 393, Bhaudaji Road, Matunga, Mumbai - 400 019.

I, Dr. Jyothi Satish hereby declare that the particulars given above are true to best of my knowledge and belief.

# ಬಾವಿ



✍ ಉಮಾ ರಾವ್

(ಉಮಾ ರಾವ್ ಕಥೆಗಳು)

ಶಿಕಾಗೋದ ಓಕ್ಪಾರ್ಕಿನಲ್ಲಿದ್ದ ಮಗನ ಮನೆಯ ಹಾಲಿನಲ್ಲಿ ಬರಲಿರುವ ಕನ್ನಡ ಸೀರಿಯಲಾಗಿ ಕಾಯುತ್ತಾ ಕೂತಿದ್ದರು ರಾಮನಾಥ.

ಮೊದಲೆಲ್ಲಾ ಹೆಂಡತಿ ಶೀಲಾ ಜೊತೆ ಶಿಕಾಗೋಗೆ ಬಂದಾಗ ಇದ್ದ ಉತ್ಸಾಹ ಈಗ ಇರಲಿಲ್ಲ. ಇದ್ದಕ್ಕಿದ್ದಂತೆ ತೀರಿಕೊಂಡ ಅವಳ ನೆನಪುಗಳನ್ನು ಹೊತ್ತು ವಿಮಾನ ಹತ್ತಿದ್ದೂ ಮಗ, ಸೊಸೆಯ ಬಲವಂತಕ್ಕೆ.

"ನೀವೊಬ್ಬರೇ ಇಲ್ಲಿ ಒಂಟಿಯಾಗಿ ಇರುವ ಪ್ರಶ್ನೆಯೇ ಇಲ್ಲ. ಸುಮ್ಮನೆ ನಮ್ಮೊಂದಿಗೆ ಬನ್ನಿ. ಒಂದೆರಡು ತಿಂಗಳಿದ್ದು ಬರುವಿರಂತೆ" ಎಂದು ಒತ್ತಾಯ ಮಾಡಿದ ವಿನೀತನಿಗೆ ಖಡಾಖಂಡಿತವಾಗಿ ಇಲ್ಲವೆನ್ನುವ, ವಾದಿಸುವ ಶಕ್ತಿ ಕೂಡ ತನ್ನಲ್ಲಿಲ್ಲವೆನ್ನಿಸಿತ್ತು. ಯಾಂತ್ರಿಕವಾಗಿ ಒಂದೆರಡು ಬಟ್ಟೆ, ಔಷಧಿಗಳನ್ನು ಸೂಟ್ಕೇಸಿನಲ್ಲಿ ಹಾಕಿಕೊಂಡು ಹೊರಡಲು ತಯಾರಾಗಿದ್ದರು.

ರೂಮಿನ ಬಾಗಿಲು ಮುಚ್ಚಿ ಕಪಾಟಿನಲ್ಲಿದ್ದ ತಮ್ಮ ಮದುವೆಯ ಫೋಟೊ ಎತ್ತಿ ಒಂದು ಕಂದು ಕವರಿನಲ್ಲಿ ಹಾಕಿ ಸೂಟ್ಕೇಸಿನಲ್ಲಿ ತನ್ನ ಬಟ್ಟೆಗಳ ನಡುವೆ ಇಟ್ಟಿದ್ದರು. ಇಬ್ಬರು ಹದಿಹರೆಯದವರಂತೆ ಕಾಣುತ್ತಿದ್ದ ಕಪ್ಪು ಬಿಳುಪಿನ ಫೋಟೊ ಕಣ್ಣುಗಳಲ್ಲಿ ಏನು ಹೊಳಪು, ಎಷ್ಟು ಸಂತಸ. ಬದುಕೆಲ್ಲಾ ಹೀಗೇ ಇರುವುದೆಂಬ ಭರವಸೆ ಹೊತ್ತ ಸಂಕೋಚದ ನಗು.

ಇಲ್ಲಿಗೆ ಬಂದು ನಿಧಾನವಾಗಿ ತಿಂಗಳುಗಳು ಉರುಳಿತ್ತು. ಯಾವಾಗಲು ಮನಸಿನಲ್ಲಿ ಬಣಬಣ. ಶೀಲಾ ಜೊತೆ ಕಳೆದ ದಿನಗಳ ನೆನೆಪು.

ಅವತ್ತಿನಿಂದ ಹೊಸ ಸೀರಿಯಲ್ " ಮಲಯ ಮಾರುತ" ಪ್ರಾರಂಭವಾಗಲಿತ್ತು. ಶೀಲಾ ಇದ್ದಿದ್ದರೆ ಎಷ್ಟು ಖುಷಿಯಾಗುತ್ತಿದ್ದಳೋ.

ಅಮೆರಿಕಾಗೆ ಬಂದಾಗ ಕನ್ನಡ ಸೀರಿಯಲ್ಗಳನ್ನು ತುಂಬಾ ಮಿಸ್ ಮಾಡುತ್ತಿದ್ದಳು. ಇದು ಅವಳ ಮೆಚ್ಚಿನ ನಿರ್ದೇಶಕರ ಸೀರಿಯಲ್ ಬೇರೆ. ಹೌದು.

ಮತ್ತೆ ಮತ್ತೆ ಶೀಲಾ ಇದ್ದಿದ್ದರೆ ಅನ್ನಿಸುತ್ತಲೇ ಇತ್ತು.

ಅಮೇರಿಕಾಗೆ ಪ್ಲೇನ್ ಹತ್ತುವಾಗ ಶೀಲಾ ಇದ್ದಿದ್ದರೆ. ಮನೆಯಲ್ಲಿ ಬೆಳಿಗ್ಗೆ ಘಮ್ಮನೆಯ ಕಾಫಿ ಪರಿಮಳ ತೇಲಿ ಬಂದಾಗ ತಾನು ಮಾಡಿದ ಕಾಫಿಗಾಗಿ ದಿನಾ ಬೆಳಗ್ಗೆ ಕಾಯುತ್ತಿದ್ದ ಶೀಲಾ ಇದ್ದಿದ್ದರೆ.

ಸಂಜೆ ಸ್ಕೂಲಿಂದ ಬಂದ ಮೊಮ್ಮಗನ ಜೊತೆ ಚೈನೀಸ್ ಚೆಕರ್ಸ್ ಆಡುವಾಗ ಅಲ್ಲಿ ಶೀಲಾ ಇದ್ದಿದ್ದರೆ. ಹೂವಿನಂತಿರುವ ಬ್ರೆಡ್ಡಿಗೆ ಬೆಣ್ಣೆ ಹಚ್ಚುವಾಗ ಶೀಲಾ ಇದ್ದಿದ್ದರೆ. ಬೆಳಿಗ್ಗೆ ಎಳೆ ಬಿಸಿಲಲ್ಲಿ ವಾಕ್ ಹೋಗುವಾಗ ಅದೇ ಚಳಿಗಾಲ ಮುಗಿದು ಎಚ್ಚೆತ್ತುಕೊಳ್ಳುತ್ತಿದ್ದ ಹುಲ್ಲು, ಕಣ್ಣು ಬಿಡುತ್ತಿದ್ದ ಟ್ಯೂಲಿಪ್ ಹೂಗಳನ್ನು ನೋಡಿದಾಗ ಜೊತೆಗೆ ಶೀಲಾ ಇದ್ದಿದ್ದರೆ.

ಪ್ರತಿ ಚಿಕ್ಕ ಪುಟ್ಟ ಘಟನೆಯ ನಂತರವೂ " ಶೀಲಾ ಇದ್ದಿದ್ದರೆ" ಎಂದು ಎದೆ ಬಡಿದು ಕೊಳ್ಳುತ್ತಲೇ ಇತ್ತು.

ಇವರು ತನ್ನ ಗುಂಗಿನಲಿರುವಾಗ ಟೈಟಲ್ ಸಾಂಗ್ ಮುಗಿದು ಮೊದಲ ಸೀನು ಶುರುವಾಗಿತ್ತು.

ತೆರೆಯ ಮೇಲೆ ಮೊದಲು ಮೂಡಿದ್ದು ಒಂದು ಬಾವಿ. ಹಾಂ ಇದೇನಿದು. ಅದೇ ಬಾವಿ. ತಮ್ಮ ಮನೆಯ ಹಿಂದಿದ್ದ ಬಾವಿ. ಹೇಗೆ ಸಾಧ್ಯ? ಬರೀ ತನ್ನ ಭ್ರಮೆ ಅಷ್ಟೆ. ಆದರೆ ಎಲ್ಲಾ ಪರಿಚಿತ. ಅದೇ ಬಾವಿ ಕಟ್ಟೆ. ಅಲ್ಲಲ್ಲಿ ಉದುರಿದ್ದ ಗಾರೆ.

ಸ್ವಲ್ಪ ತುಕ್ಕು ಹಿಡಿದಿದ್ದ ರಾಟೆ. ಒಂದು ಮೂಲೆಯಲ್ಲಿ ಈಗ ಮಸುಕಾದ ಕೆಂಪು ಪೇಂಟ್‌ನಲ್ಲಿ ಚೆನ್ನ ಬರೆದಿದ್ದ "ಮೂರು ನಾಮ, ನಾಳೆ ಬಾ".

ಮೇಲಿಂದ ನೇತಾಡುತ್ತಿದ್ದ ಹಗ್ಗ. ಅದಕ್ಕೊಂದು ಕೊಡ. ತಾನು ಹುಟ್ಟಿದಾಗಿನಿಂದ ಕಂಡಿದ್ದ ಬಾವಿ

ತಪ್ಪಾಗುವುದು ಸಾಧ್ಯವೇ ಇರಲಿಲ್ಲ. ತೆರೆ ಮೇಲೆ ಇಬ್ಬರು ಹುಡುಗಿಯರು ನಿಧಾನವಾಗಿ ಬಂದು ಬಾವಿಯ ಕಟ್ಟೆ ಮೇಲೆ ಕೂತು ಮಾತಾಡ ತೊಡಗಿದರು. ಏನೋ ಗುಟ್ಟು ಹಂಚಿಕೊಳ್ಳುತ್ತಿದ್ದಂತೆ.

ಹಾಗೆಯೇ ಬಾವಿ ಕಟ್ಟೆ ಹತ್ತಿ ಕೂತರು. ಅಯ್ಯೋ ಹುಷಾರು! ಜಾರಿದರೆ ಗತಿ ಏನು?!

ಯಾವಾಗಲು ತಮ್ಮ ಮನೆಯಲ್ಲಿ ಯಾರು ಬಾವಿ ಕಟ್ಟೆಯ ಮೇಲೆ ಕೂತರೂ ಹಿಂದೆಯೇ ಕೇಳಿ ಬರುತ್ತಿದ್ದ ಕೂಗು. ಅವರ ಕಾಲು ಸಣ್ಣಗೆ ನಡುಗಿತು. ಎಷ್ಟು ಆಳ. ಒಳಗೆ ತಿಳಿನೀರು. ಬಗ್ಗುತ್ತಿದ್ದಾರೆ. ಜಾರಿದರೆ?

ದೃಶ್ಯ ಬದಲಾಗಿತ್ತು.

***

ರಾಮನಾಥರ ಯೋಚನೆಗಳು ಹಾಗೇಯೇ ಎಲ್ಲೊ ತೇಲಿ ಹೋಗಿ ಟಿವಿ ಪರದೆಯ ಮೇಲೆ ಬರುತ್ತಿದ್ದ ಚಿತ್ರಗಳು ಮಸುಕಾದವು. ಮತ್ತೆ ಅದೇ ಪ್ರಶ್ನೆ ಮನದ ಮೂಲೆಯಿಂದ ಇಣುಕಿತು. ತಾನು ಮನೆ ಮಾರಿದ್ದು ಸರಿಯೆ? ಆದರೆ,

ಆತ್ಮೀಯ ಗೆಳೆಯ ಮೂರ್ತಿಗೆ ತಾನೆ ಮಾರಿದ್ದು. ಮಾರುವ ಮೊದಲು ತುಂಬಾ ಯೋಚಿಸಿ ಆಗಿದೆ.

ಒಂದು ಫ್ಲಾಟ್ ಬುಕ್ ಮಾಡಿಯೂ ಆಗಿದೆ. ದುಡ್ಡು ಪೂರ್ತಿ ತಗೊಂಡು ಆಗಿದೆ. ಈಗ ತನ್ನ ತೀರ "ಪರ್ಸನಲ್ ಬಿಲಾಂಗಿಂಗ್ಸ್" ಒಂದು ಟ್ರಂಕ್‌ನಲ್ಲಿಟ್ಟು ಬೀಗ ಹಾಕಿ " ಜೋಪಾನ, ಮುಂದಿನ ಸಲ ತಗೊಂಡು ಹೋಗ್ತೀನಿ. ಅಷ್ಟು ಹೊತ್ತಿಗೆ ನನ್ ಫ್ಲಾಟ್ ರೆಡಿಯಾಗಿರುತ್ತದೆ. ಅದನ್ನು

*(ಪುಟ 13ಕ್ಕೆ.......)*

# ಪ್ರವಾಸದ ಅನುಭವ ಕಥನ



✍ **ಡಾ. ಸುಮಾ ದ್ವಾರಕಾನಾಥ್**

ಯಾವ ವರ್ಷ ಎನ್ನುವುದು ನೆನಪಿಲ್ಲ, ಆದರೆ ಪ್ರತಿಭಾ ವೈದ್ಯ ಅನ್ನುವ ಒಬ್ಬ ಸದಸ್ಯೆ, ಮಹಾಬಲೇಶ್ವರ ಪ್ರವಾಸದ ಜವಾಬ್ದಾರಿ ವಹಿಸಿಕೊಂಡಿದ್ದರು. ಎಲ್ಲರೂ ರಾತ್ರಿ ಹೊರಟು ಬೆಳಗಿನ ಜಾವ ತಲುಪಿದೆವು. ಪಶ್ಚಿಮ ಘಟ್ಟಗಳ ಸಾಲಿನಲ್ಲಿರುವ ಮಹಾಬಲೇಶ್ವರ ಒಂದು ಗಿರಿಧಾಮ. ಅದು ಸ್ಟ್ರಾಬೆರ್ರಿ ಮತ್ತು ರಾಸ್ಬೆರ್ರಿ ಬೆಳೆಯುವ ತೋಟಗಳ ನಾಡು. ಅಲ್ಲಿ ಒಂದು ದೊಡ್ಡ ಕಾಂಪೌಂಡಿನಲ್ಲಿ ಸಣ್ಣ ಸಣ್ಣ ಕ್ಯಾಬೀನುಗಳನ್ನು ಮಾಡಿದ್ದರು. ಒಂದೊಂದು ರೂಮಿನಲ್ಲಿ 5–5 ಜನರನ್ನು ಹೊಂದಿಸಿದರು. ಬೆಳಗ್ಗೆ ಸ್ನಾನ, ತಿಂಡಿ ಮುಗಿಸಿ ಊರು ನೋಡಲು ಹೊರೆಟೆವು. ಮೊದಲು ಕೃಷ್ಣಾ ನದಿಯ ಉಗಮ ಸ್ಥಾನವಾದ ಪಂಚಗಂಗಾ ದರ್ಶನಕ್ಕೆ ಹೋದೆವು. ಅಲ್ಲಿ ಐದು ನದಿಗಳ ನೀರು (ಕೃಷ್ಣಾ, ಗಾಯಿತ್ರಿ, ವೆನ್ನ, ಸಾವಿತ್ರಿ, ಮತ್ತು ಕೊಯ್ನಾ ನದಿ) ನಂದಿ ಮುಖದಿಂದ ಹರಿದು ಬರುವುದರಿಂದ ಪಂಚಗಂಗೆಯೆಂದು ಹೆಸರು ಬಂದಿದೆ. ಅಲ್ಲಿಂದ ರುದ್ರಾಕ್ಷ ರೂಪದಲ್ಲಿರುವ ಶಿವಮಂದಿರದ ದರ್ಶನ ಪಡೆದೆವು. ಈ ಶಿವಮಂದಿರದ ಸಲುವಾಗೇ ಮಹಾಬಲೇಶ್ವರ ಎನ್ನುವ ಹೆಸರು ಈ ಊರಿಗೆ ಬಂದಿದೆ. ಮುಂದೆ ಜೇನುಸಾಕಣೆ ಕೇಂದ್ರಕ್ಕೆ ಬಂದು ಜೇನುತುಪ್ಪ ತೆಗೆಯುವ ಪ್ರಕ್ರಿಯೆಯನ್ನು ನೋಡಿದೆವು. ಊಟದ ಸಮಯವಾದ್ರಿಂದ ವಾಪಸ್ಸು ಬಂದೆವು. ಆಶ್ಚರ್ಯವೆಂದರೆ ಊಟದ ಮನೆಯಲ್ಲಿ ನಮಗೆ ಮರಾಠಿ ಊಟದೊಂದಿಗೆ ಬಿಸಿ ಬಿಸಿ ಹೋಳಿಗೆ ಕಾದಿತ್ತು. ಉಂಡು ತೂಕಡಿಕೆ ಬರುತ್ತಿದ್ದಂತೇ ಅಲ್ಲಿಯ ವಿವಿಧ ಶಿಖರಗಳ ಮೇಲೆ ಕಾಣುವ ದೃಶ್ಯಗಳನ್ನು ನೋಡಲು ಎಚ್ಚರ ಮಾಡಿಕೊಂಡು ಹೊರೆಟೆವು. ಅಂದಿನ ರಾತ್ರಿ ಊಟವಾದ ಮೇಲೆ ಬಯಲಿನಲ್ಲಿ camp fire ವ್ಯವಸ್ಥೆ ಮಾಡಿದ್ದರು. ಚಳಿಗಾಲವಾದ್ದರಿಂದ ಸುತ್ತಲೂ ಕುಳಿತು ಮನರಂಜನೆ ನಡೆಯಿತು.



ಮಾರನೆಯ ಬೆಳಗ್ಗೆ 24 ಕಿಮಿ. ದೂರವಿರುವ ಪ್ರತಾಪಘಡ್ ಕೋಟೆ ನೋಡಲು ಹೋದೆವು. ಛತ್ರಪತಿ ಶಿವಾಜಿ ಮಹಾರಾಜರು ಅಫ್ಜಲ್ ಖಾನನನ್ನು ಕೊಂದ ಜಾಗ ಅದು. ಹತ್ತಲು ಎಲ್ಲರಿಗೂ ಸ್ವಲ್ಪ ಕಷ್ಟವೇ ಆಯಿತು. ಆದರೆ ಒಬ್ಬರಿಗೊಬ್ಬರು ಹುರುಪು ನೀಡಿ ಹತ್ತಿದ್ದಾಯಿತು. ಈಗ ಅಲ್ಲಿ ಶಿವಾಜಿಯ ಕಲ್ಲಿನ ಪ್ರತಿಮೆ ಇದೆ. ಸಂಜೆ ಊರಿಗೆ ಬಂದು ಎಲ್ಲರೂ ಆದಷ್ಟು ಶಾಪಿಂಗ್ ಮಾಡಿದೆವು. ಮೂರನೆಯ ದಿನ ಸುಮಾರು 8 ಕಿ.ಮಿ. ದೂರ ಇರುವ ಪಂಚಗಣಿಗೆ ಹೋದೆವು. ಅಲ್ಲಿ ಮ್ಯಾಪ್ರೊ ಕಂಪನಿಯ ಉದ್ಯಾನ, ತಂಪು ಪಾನೀಯ ಮಾಡುವ ಪ್ರಕ್ರಿಯೆ, ಮತ್ತುಅಲ್ಲಿಯ ಮಾರುಕಟ್ಟೆ ನೋಡಲು ಇಡೀ ದಿನ ಹಿಡಿಯಿತು. ಅಲ್ಲೂ ಸಾಧ್ಯವಾದಷ್ಟೂ ಮಾರುಕಟ್ಟೆ ಖರೀದಿಸಿ ಖಾಲಿ ಮಾಡಿದ್ದಾಯಿತು. ರಾತ್ರಿ ಮಲಗುವ ಮುಂಚೆ housie ಆಡಿದೆವು. ಆದರೆ ಹೊಸ ನಿಯಮವೆಂಬಂತೆ ಬಂದ ಬಹುಮಾನದ ದುಡ್ಡನ್ನು ವಸತಿ ಗೃಹದ ಕೆಲಸದಾಳುಗಳಿಗೆ ಇನಾಮು ರೂಪದಲ್ಲಿ ಕೊಡಲಾಯಿತು. ಮೂರನೆಯ ದಿನ, ಏಶ್ಯಾದ ಎರಡನೆಯ ದೊಡ್ಡ ಪ್ರಸ್ಥಭೂಮಿ ನೋಡಲು ಹೋದೆವು. ಅಲ್ಲಿ ಕುದುರೆ ಸವಾರಿ ಮಾಡಿದೆವು. ಪಂಚಪಾಡವರ ಹೆಜ್ಜೆ ಗುರುತನ್ನೂ ನೋಡಿ ಬಂದೆವು. ವಯ್ ಮೂಲಕ ವಾಪಸ್ಸು ಬಂದೆವು.

**ಗಜಾನನ ಮಹಾರಾಜ್ ಕೀ ಜೈ**

ಮತ್ತೆ ಮರು ವರ್ಷ ಬಹುದಿನದ ಕನಸಾದ ಶೆಗಾವ್‌ಗೆ ಪ್ರವಾಸ ಏರ್ಪಡಿಸಲಾಯಿತು. ರೈಲಿನಲ್ಲಿ ಟಿಕೆಟ್ ಬುಕ್ ಮಾಡಲು ಸದಸ್ಯೆಗೆ ಹೇಳಿದರೆ ಕಣ್ಣಮುಚ್ಚಿಕೊಂಡು ಸಿಕ್ಕಿದ ಕಡೆ ಸೀಟ್‌ಗಳನ್ನು ತಂದಳು. ನಾವೂ ಅವಳು ಕಾಳಜಿ ವಹಿಸುತ್ತಾಳೆಂದು ತಿಳಿದಿದ್ದೆವು. ಎಲ್ಲರಿಗೂ ತೊಂದರೆ ಆಯಿತು. ವಿಧಿ ಇಲ್ಲದೆ ಹಾಗೇ ಒಂದು ರಾತ್ರಿ ಪಯಣಿಸಿದೆವು. ಇದು ಮಹಾರಾಷ್ಟ್ರದ, ಬುಲ್ಡಾನಾ ಜಿಲ್ಲೆಯಲ್ಲಿರುವ ಒಂದು ನಗರ. ಶ್ರೀ ಕ್ಷೇತ್ರ ನಾಗ್ಝರಿ (ಖಾಮ್ಗಾವ್), ಮುಂಬಯಿ – ಕಲ್ಕತ್ತಾ ರೈಲ್ವೇ ಹಾದಿಯಲ್ಲಿ ಸುಮಾರು 555 ಕಿಮಿ ದೂರದಲ್ಲಿದೆ. ರೈಲ್ವೆ ಸ್ಟೇಷನ್‌ನಿಂದ ಸುಮಾರು ಒಂದು ಮೈಲಿ ದೂರದಲ್ಲಿ ಶ್ರೀ ನಾಗೇಶ್ವರ ಮಂದಿರ ಮತ್ತು ಗಜಾನನ ಮಹಾರಾಜರ ಮಠ ಇದೆ. ಮಂದಿರ ಮತ್ತು ಸಮಾಧಿಯ ನಾಲ್ಕೂ ಕಡೆ ವಿಶಾಲವಾದ ಪಾಠಶಾಲೆಗಳಿವೆ.

ನಾವು ರೈಲ್ವೆ ನಿಲ್ದಾಣದಿಂದ ಆನಂದ ಸಾಗರ ಭಕ್ತ ನಿವಾಸ ಎನ್ನುವ ವಸತಿ ಗೃಹಕ್ಕೆ ಹೋದೆವು. ನೋಡಿದರೆ ಭವ್ಯವಾದ ಯಾವ 5 ಸ್ಟಾರ್ ಹೋಟೆಲ್‌ಗೂ ಹೋಲಿಸಬಹುದಾದ ಕಟ್ಟಡ. ಸುತ್ತಲೂ ಸುಂದರವಾದ ತೋಟ. ಎಷ್ಟು ಜನ ಬಂದರೂ ಇಳಿದುಕೊಳ್ಳಬಹುದಾದ ಸುಸಜ್ಜಿತ ಕೋಣೆಗಳು ಕೈಗೆಟಕುವ ಬೆಲೆಯಲ್ಲಿ ಭಕ್ತರಿಗೆ ಒದಗಿಸುವ, ಮಂದಿರದ ಟ್ರಸ್ಟ್‌ನ ಪ್ರಯತ್ನನಿಜವಾಗಲೂ ಮೆಚ್ಚುವಂತಹುದು. ಬ್ಯಾಗ್‌ಗಳನ್ನು ರೂಮಿನಲ್ಲಿಟ್ಟು, ಭೋಜನ ಶಾಲೆಗೆ ಬಂದರೆ ಅವಲಕ್ಕಿ ಉಪ್ಪಿಟ್ಟು ಉಚಿತವಾಗಿ ಹಂಚುತ್ತಿದ್ದರು. ಅಲ್ಲಿಯ ಶಿಸ್ತು ನೋಡೇ ನಮಗೆ ಆಶ್ಚರ್ಯವಾಯಿತು. ನಾವು ತಿಂಡಿ ತಿಂದು ರೂಮಿಗೆ ವಾಪಸ್ಸಾಗುವಾಗ ಕಂಡ ದೃಶ್ಯ ನಂಬಲೇ ಕಷ್ಟವಾಯಿತು. ಹೆಂಗಸರು ಗಂಡಸರಾದಿಯಾಗಿ ಮುದುಕರು, ಹುಡುಗರು ಯೂನಿಫಾರ್ಮ್ ಧರಿಸಿ ಸರತಿ ಸಾಲಿನಲ್ಲಿ ನಿಂತಿದ್ದು ಕಂಡು, ಏನೆಂದು ವಿಚಾರಿಸಿದಾಗ ಅಲ್ಲಿಯ ವಸತಿ ಗೃಹದಲ್ಲಿ ಮೂರು ದಿನದ ಉಚಿತ ಸೇವೆಗೆ ನೊಂದಾಯಿಸಿ ದವರೆಂದು ತಿಳಿಯಿತು. ವರ್ಷದ ಮೊದಲೇ ಬುಕ್ ಮಾಡಿ ಬಂದವರು. ಮೂರು ದಿನ ಇಡೀ ಕಟ್ಟಡದ ಸ್ವಚ್ಚತೆ, ಭಕ್ತರಿಗೆ ಬೇಕಾದ ಸೇವೆ ನೀಡುವ ಅಭಿಲಾಷೆಯಿಂದ

*(ಪುಟ 13ಕ್ಕೆ.......)*

# ಶ್ರೀ ಅಶ್ವಥ್ ಅವರ ನೆನಪು

# ಶತಮಾನೋತ್ಸವದಲ್ಲಿ ಸುಗಮ ಸಂಗೀತ




'ನೇಸರು' ವರದಿ

ಎಪ್ರಿಲ್ 27, 2025 ಮುಂಬಯಿಯಲ್ಲಿ ಮರೆಯಲಾಗದ ಒಂದು ಸಂಜೆ. ಶ್ರೀ ಅಶ್ವಥ್ ಅವರು ಕನ್ನಡ ನಾಡಿನ ಹಿರಿಯ ಸುಗಮ ಸಂಗೀತ ಗಾರರಲ್ಲಿ ಒಬ್ಬರಾಗಿದ್ದರು. ಅವರು ಹಿಂದೆಯೇ ಎರಡು ಬಾರಿ ಮೈಸೂರು ಅಸೋಸಿಯೇಷನ್ ಗೆ ಬಂದು ತಮ್ಮ ಸಂಗೀತ ಸೌರಭವನ್ನು ಬೀರಿದ್ದರು. ಇದರ ನೆನಪು ಮತ್ತೆ ನಮ್ಮ ಶತಮಾನೋತ್ಸವದಲ್ಲಿ ಬೀರಬೇಕೆಂದು ಶ್ರೀ ಶ್ರೀನಿವಾಸ ಕಪ್ಪಣ್ಣನವರ ಸಹಯೋಗದಲ್ಲಿ ಬೀರಿದೆ.

ಆದರೆ ಎಲ್ಲದಕ್ಕೋ ಒಬ್ಬರು ಸೊಂಟಕಟ್ಟಿ ಬೆಂಬಲವಾಗಿ ನಿಂತರೆ ಮಾತ್ರ ಈ ಕೆಲಸ ಸುಗಮವಾಗುತ್ತದೆ. ಕನ್ನಡ ನಾಡಿನ ಹಿರಿಯ ನಟ-ನಿರ್ದೇಶಕ ಶ್ರೀ. ಪ್ರಕಾಶ ಬೆಳವಾಡಿಯವರು ನಾನು ಈ ಕೆಲಸದಲ್ಲಿ ಕೈಗೂಡಿಸುತ್ತೇನೆ ಎಂದು ನಿಂತಿದ್ದು ನಮ್ಮೆಲ್ಲರ ಬೆನ್ನೆಲುಬು ಬಲವಾಯಿತು.




ಶ್ರೀ ರಾಮಚಂದ್ರ ಹಡಪದ್ ಅವರ ತಂಡ ಕೂಡ ಯಾವ ಹಣಕಾಸಿನ ತೊಂದರೆಯನ್ನೂ ನೀಡದೆ ಮುಂಬಯಿಯ ಕೇಳುಗರಿಗೆ ಶ್ರೀ ಅಶ್ವಥ್ ಅವರ ಸಂಗೀತದ ಕಂಪನ್ನು ಮತ್ತೆ ಹರಡುವುದಕ್ಕೆ ಮುಂದಾದರು. ಅವರ ತಂಡದ ಹನ್ನೊಂದು ಕಲಾವಿದರು, ಮುಂಬಯಿಯ ಬೇಸಿಗೆಯ ಬಿಸಿಲಿಗೂ ಹೆದರದೆ ಮುಂಬಯಿಗೆ ಬಸ್ಸಿನಲ್ಲಿ ರವಾನೆಯಾದರು. ಬಸ್ ತಡವಾಗಿ ಬಂದರೂ ಕೂಡ 2.00 ಘಂಟೆಗೆ ಸಭಾಗೃಹಕ್ಕೆ ಬಂದು ರಿಹರ್ಸಲ್‌ನಲ್ಲಿ ತೊಡಗಿದರು.




ಭಾನುವಾರ ಸಂಜೆ ಅವರನ್ನು ಕೇಳಲು ಆತುರವಾಗಿ ಬಂದು ಜನ ಸೇರಿ ತುಂಬಿದರು.

ಮೊದಲಿಗೆ ಶ್ರೀ ಶಶಿಕಾಂತ ಜೋಷಿಯವರು ಸ್ವಾಗತವನ್ನು ಕೋರಿದ ಮೇಲೆ ಶ್ರೀ. ನಾರಾಯಣ




ನವಿಲೇಕರ್ ಅವರು ಕಲಾವಿದರ ಪರಿಚಯ ಹಾಗೂ ಶ್ರೀ. ಪ್ರಕಾಶ್ ಬೆಳವಾಡಿಯವರ ಕೊಡುಗೆಯನ್ನು ಸ್ಮರಿಸಿದರು. ಶ್ರೀ ಕಪ್ಪಣ್ಣನವರು ನಮ್ಮ ಅಸೋಸಿಯೇಷನ್‌ನ ಸದಸ್ಯರೇ ಎಂಬ ಹೆಗ್ಗಳಿಕೆಯ ಮಾತನ್ನೂ ಆಡಿದರು. ಆನಂತರ ಶ್ರೀ. ಪ್ರಕಾಶ್ ಬೆಳವಾಡಿಯುವರೇ ಕಾರ್ಯಕ್ರಮದ ನಿರೂಪಣೆಯನ್ನು ಮಾಡಿದರು. ಶ್ರೀ ಅಶ್ವಥ್ ಅವರ ಗುರಿ, ಕಾಯಕ, ಹಾಗೆಯೇ ಕವಿತೆಗಳ ಸಾರವನ್ನು ಸಂಗೀತದ ಮೂಲಕ ಕೇಳುಗರಿಗೆ ಮುಟ್ಟಿಸುವ ಅವರ ಕಲೆಯನ್ನು ಕುರಿತು ವಿಶದವಾಗಿ ಹೇಳಿದರು.

ಈ ಸಂದರ್ಭದಲ್ಲಿ ಶ್ರೀ. ಅಶ್ವಥ್ ಅವರ ಪತ್ನಿ ಶ್ರೀಮತಿ ಚಂದ್ರಾ ಅಶ್ವಥ್, ಅವರ ಮಗಳು ಸಹನಾ, ಅಶ್ವಥ್ ಅವರು ಕೂಡ ಸಭಾಂಗಣದಲ್ಲಿ ನಮ್ಮೊಡನೆ ಇದ್ದಿದ್ದು, ಕಾರ್ಯಕ್ರಮಕ್ಕೆ ಮೆರುಗು ಕೊಟ್ಟಿತ್ತು. ಮಹಾರಾಷ್ಟ್ರದ ಡಿ.ಜಿ.ಪಿ.ಯುವರಾದ ಶ್ರೀ. ಮಲ್ಲಿಕಾರ್ಜುನ ಪ್ರಸನ್ನ ರವರು ಕಾರ್ಯಕ್ರಮಕ್ಕೆ ಬಂದು ನಮ್ಮ ಸನ್ಮಾನವನ್ನು ಸ್ವೀಕರಿಸಿದ್ದು ನಮ್ಮ ಸೌಭಾಗ್ಯ.







ನಂತರ ಶ್ರೀ. ರಾಮಚಂದ್ರ ಹಡಪದ್ ಅವರು ಬಸವಣ್ಣನವರ ವಚನದಿಂದ ತಮ್ಮ ಕಂಚಿನ ಕಂಠದಿಂದ ಮೊದಲು ಮಾಡಿದರು. ನಂತರ ಕುವೆಂಪು, ಮೈಸೂರು ಅನಂತಸ್ವಾಮಿಯವರ ಕವನಗಳನ್ನು ತಮ್ಮ ಶೈಲಿಯಲ್ಲಿಯೇ ಹಾಡಿ, ಕೇಳುಗರ ಎದೆಯನ್ನು ಸೂರೆಗೊಂಡರು. ವಿದುಷಿಯರಾದ ಸ್ಪರ್ಷ, ಶೃತಿ, ಮೇಘನಾ ಅವರು ತಮ್ಮ ಮಧುರ ಧ್ವನಿಯಲ್ಲಿ ಕವಿತೆಗಳನ್ನು ಹಾಡಿದರು. ಹಿನ್ನೆಲೆಯಲ್ಲಿ ಗಾಯಕರಾಗಿ ಶ್ರೀ ರಾಜೇಶ್ ಕಶ್ಯಪ್ ಮತ್ತು ಶ್ರೀ. ಪ್ರಮೋದ್ ತಮ್ಮ ಅಮೋಘ ದನಿಗಳನ್ನು ಕೂಡಿಸಿದ್ದರು. ವಾದ್ಯ ಸಹಕಾರ ಶ್ರೀಯುತರಾದ ಪರಶುರಾಮ್, ನೀತು ನಿನಾದ್, ಜಲೀಲ್ ಪಾಷಾ, ಮಂಜುನಾಥ್ ಭಟ್, ಶಿವಮಲ್ಲು ಅವರುಗಳು.




ಶ್ರೀ. ಪ್ರಕಾಶ್ ಬೆಳವಾಡಿಯವರ ನಿರೂಪಣೆ, ಅಶ್ವಥ್ ಅವರು ವ್ಯಕ್ತಿತ್ವ ಹಾಗೂ ಅವರ ಸಿಟ್ಟಿನ ಸೌರಭವೇ ಕಲೆಯ ಭಾವವಾಗಿತ್ತು ಎಂದರು. ಶ್ರೀ ಅಶ್ವಥ್ ಅವರ ಒಡನಾಡಿ



ಶ್ರೀ. ಶ್ರೀನಿವಾಸ ಕಪ್ಪಣ್ಣನವರು ಮಾತನಾಡಿ ತಮ್ಮ ನೆನಪುಗಳನ್ನು ಹಂಚಿಕೊಂಡರು. ಆ ನಡುವೆ ಶ್ರೀಮತಿ ಚಂದ್ರಾ ಅಶ್ವಥ್ ಅವರೂ ಮಾತನಾಡಿ ಹೇಗೆ ಅಶ್ವಥ್ ಅವರಿಗೆ ಸಿಟ್ಟು ಏಕೆ ಬಂತು ಎಂದು ಕೇಳುವಷ್ಟರಲ್ಲಿ ಆ ಸಿಟ್ಟು ಮರೆಯಾಗಿ ನಗುಮುಖವಾಗುತ್ತಿದ್ದರು ಎಂದರು.



ಉಮೇಶ್ ಮಾಸ್ಕೇರಿಯವರು, ಗಣ್ಯರ ಹಾಗೂ ಕಲಾವಿದರ ಸನ್ಮಾನ ಮಾಡಿದರು. ಶ್ರೀ ಗಣಪತಿ ಶಂಕರಲಿಂಗ್ ಅವರು ನೆರೆದ ಹಲವಾರು ಕನ್ನಡ ಸಂಘ ಸಂಸ್ಥೆಗಳಿಗೆ ವಂದನೆಗಳನ್ನು ಸಲ್ಲಿಸಿದರು. ಅಂತೆಯೇ ಪ್ರಚಾರದಲ್ಲಿ ನೆರವಾದ ಶ್ರೀ. ಸುರೇಶ್ ಮಾರ್ನಾಡ್ ಅವರಿಗೂ ವಂದನೆಗಳನ್ನು ಸಲ್ಲಿಸಿದರು.

ಮೂರು ಘಂಟೆಗಳ ಕಾಲ ನಡೆದ ಈ ಸುಗಮ ಸಂಗೀತ ಕಾರ್ಯಕ್ರಮ ಮುಂಬಯಿಯ ಕನ್ನಡಿಗರ ಮನದಲ್ಲಿ ಅಚ್ಚಳಿಯದೆ ನಿಲ್ಲುತ್ತದೆ.





# ಮೈಸೂರು ಅಸೋಸಿಯೇಷನ್, ಮುಂಬಯಿ

# The Mysore Association, Bombay

393, Bhau Daji Road, Matunga, Mumbai - 400 019. Tel: ( 022 ) 2403 7063

Website: www.mysoreassociation.in E-mail: mysoreassociation.mumbai@gmail.com


## ಮೈಸೂರು ಅಸೋಸಿಯೇಷನ್ ನೂರರ ನಲಿವು 1926–2026

ಮಾರ್ಚ್ 06, 2025

## ನೇಸರು ಜಾಗತಿಕ ಏಕಾಂಕ ನಾಟಕ ರಚನಾ ಸ್ಪರ್ಧೆ – 2025

# ಶತಮಾನೋತ್ಸವ ಪ್ರಶಸ್ತಿ

ಅಸೋಸಿಯೇಷನ್ ಮುಂಬೈ ಒಂದು ಪ್ರತಿಷ್ಠಿತ ಕನ್ನಡ ಸಂಸ್ಥೆಯಾಗಿದ್ದು ತನ್ನ ಶತಕವನ್ನು ಪೂರೈಸುವತ್ತ ಮುಂದುವರಿಯುತ್ತಿದೆ. ಈ ಮೊದಲೂ ಕೂಡಾ ಕನ್ನಡ ಕವನ, ಕಥೆ ಹಾಗೂ ಏಕಾಂಕ ನಾಟಕ ಸ್ಪರ್ಧೆಯನ್ನು ಆಯೋಜಿಸುತ್ತಲೇ ಬಂದಿದೆ. ಇದರ ಮುಂದುವರಿದ ಭಾಗವಾಗಿ **"ಶತಮಾನೋತ್ಸವ ವಿಶೇಷ"** ಜಾಗತಿಕ ಏಕಾಂಕ ನಾಟಕ ರಚನಾ ಸ್ಪರ್ಧೆಯ ಘೋಷಣೆಯನ್ನು ಈ ಮೂಲಕ ಮಾಡಲಾಗುತ್ತಿದೆ.

ಈ ಸ್ಪರ್ಧೆಯಲ್ಲಿ ಭಾರತದಾದ್ಯಂತ ಆಸಕ್ತರೆಲ್ಲರೂ ಭಾಗವಹಿಸಬಹುದು. ಇಲ್ಲಿ ಯಾವುದೇ ಪ್ರವೇಶ ಶುಲ್ಕವಿರುವುದಿಲ್ಲ. ಆಸಕ್ತರು ಯಾವುದೇ ವಿಷಯದ ಕುರಿತು ಏಕಾಂಕ ನಾಟಕವನ್ನು ರಚಿಸಬಹುದು.

### ಏಕಾಂಕ ನಾಟಕ ರಚನಾ ಸ್ಪರ್ಧೆ

| | | |
|---|---|---|
| **ಪ್ರಥಮ ಬಹುಮಾನ** | – | **ರೂ. 50,000/–** |
| **ದ್ವಿತೀಯ ಬಹುಮಾನ** | – | **ರೂ. 30,000/–** |
| **ತೃತೀಯ ಬಹುಮಾನ** | – | **ರೂ. 20,000/–** |

### ಸ್ಪರ್ಧೆಯ ನಿಯಮಾವಳಿಗಳು:

- ಏಕಾಂಕ ನಾಟಕ ಕನ್ನಡದಲ್ಲಿದ್ದು, ಸ್ವರಚಿತವಾಗಿರಬೇಕು, ಅನುವಾದ ಅನುಕರಣೆ ಆಗಿರಕೂಡದು.
- ಸ್ಪರ್ಧೆಗೆ ಕಳುಹಿಸಿದ ನಾಟಕಗಳು ಬೇರೆಲ್ಲೂ ಪ್ರಕಟವಾಗಿರಬಾರದು.
- ಒಬ್ಬ ವ್ಯಕ್ತಿಯು ಒಂದಕ್ಕಿಂತ ಹೆಚ್ಚು ನಾಟಕವನ್ನು ಕಳುಹಿಸುವಂತಿಲ್ಲ.
- ಸ್ಪರ್ಧೆಗೆ ಬಂದ ನಾಟಕವನ್ನು ಮರಳಿಸಲಾಗುವುದಿಲ್ಲ.
- ನಾಟಕವು 30 ಪುಟಗಳನ್ನು ಮೀರಬಾರದು. ನಾಟಕವನ್ನು ಪ್ರದರ್ಶಿಸಿದರೆ 45–50 ನಿಮಿಷಗಳೊಳಗೆ ಮುಗಿಯುವಂತಿರಬೇಕು.
- ಕಾಗದದ ಒಂದೇ ಮಗ್ಗುಲಲ್ಲಿ ಚಿತ್ತಿಲ್ಲದಂತೆ ಬರೆದಂತಹ ಅಥವಾ ಕಂಪ್ಯೂಟರ್ ಮುದ್ರಿತ ಬರಹವನ್ನು ಅಂಚೆ ಅಥವಾ ಕೆಳಗೆ ತಿಳಿಸಿದ 'ಇ–ಮೇಲ್'ಗೆ ಕಳುಹಿಸಬಹುದು.

  **nataka.nesaru@gmail.com**
- ಬರೆದವರ ಹೆಸರು, ವಿಳಾಸ, ಜನ್ಮ ದಿನಾಂಕ, ಮೊಬೈಲ್ ಸಂಖ್ಯೆ ಹಾಗೂ ಇಮೇಲ್ ಪ್ರತ್ಯೇಕ ಪುಟದಲ್ಲಿ ಬರೆದಿರಬೇಕು.
- ತೀರ್ಪುಗಾರರ ತೀರ್ಮಾನವೇ ಅಂತಿಮ. ಇದರ ಬಗ್ಗೆ ಯಾವ ಚರ್ಚೆ ಅಥವಾ ಪತ್ರ ವ್ಯವಹಾರ ಇಲ್ಲ.
- ನಾಟಕವು ನಮ್ಮ ಕೈ ಸೇರುವ ಕೊನೆಯ ದಿನಾಂಕ : ಜೂನ್ 30, 2025
- ಆಯ್ಕೆಯಾದ, ನಾಟಕಗಳನ್ನು ನಮ್ಮ ಮೈಸೂರು ಅಸೋಸಿಯೇಷನ್ನಿನ ಮುಖವಾಣಿ 'ನೇಸರು'ವಿನಲ್ಲಿ ಕಾಲಕಾಲಕ್ಕೆ ಪ್ರಕಟಿಸುವ ಹಕ್ಕು ಮೈಸೂರು ಅಸೋಸಿಯೇಷನ್ ಕಾದಿರಿಸಿದೆ.


Postal Address:

**The Mysore Association, Bombay**

393, Bhau Daji Road, Matunga (Central), Mumbai - 400 019.

Tel: 022 - 2403 7065 (M) – 83697 88157 (ಬೆಳಿಗ್ಗೆ 11.00 ರಿಂದ ಸಂಜೆ 7.00 ಘಂಟೆಯವರೆಗೆ)

## ಪ್ರವಾಸದ ಅನುಭವ ಕಥನ



ಬಂದಿದ್ದರು. ಅಂದು ನಿಜವಾಗಲೂ ಮಾನವತೆಯ ದರ್ಶನವಾಯಿತು. ಇಂದಿನ ಸ್ವಾರ್ಥ ಪ್ರಪಂಚದಲ್ಲಿ ಹೀಗೂ ಸೇವೆ ಮಾಡುವರುಂಟೇ ಎನಿಸಿತು. ಎಷ್ಟೇ ಆಗಲಿ ನಮ್ಮ ಹಿಂದೂ ಧರ್ಮ 'ಸರ್ವೇ ಜನಾ ಸುಖಿನೋ ಭವಂತು' ಎಂದು ಹಾರೈಸುವವರು. ರೂಮಿನ ಸೌಕರ್ಯಗಳಂತೂ ಬಿಸಿನೀರಿನ ವ್ಯವಸ್ಥೆಯೇನು, ಶೌಚಾಲಯದ ಸ್ವಚ್ಛತೆಯೇನು ಅಲ್ಲಲ್ಲೇ ಕಾರಿಡಾರ್‌ಗಳಲ್ಲಿ ಕಾಫಿ, ಚಾ vending ಮಷೀನ್‌ಗಳ ಅಳವಡಿಕೆ, trustನ ಶ್ರದ್ಧೆಯನ್ನು ಎತ್ತಿ ತೋರಿಸುತ್ತಿತ್ತು. ಸ್ನಾನ ಮಾಡಿ ಶ್ರೀ ಗಜಾನನ ಮಹಾರಾಜರ ಮಂದಿರಕ್ಕೆ ಹೊರಟೆವು.

ಅಸಾಧ್ಯವಾದ ಬಿಸಿಲಲ್ಲಿ ಊರೊಳಗೆ ಹೋದರೆ ವಿಶಾಲವಾದ ಮಂದಿರದೊಳಗೆ ಭಕ್ತರೆಲ್ಲರಿಗೂ ಉಚಿತವಾಗಿ ಚಾ ಸರಬರಾಜು ಮಾಡುತ್ತಿದ್ದರು. ಬಿಸಿಲಿದ್ದರೂ ಚಾ ಕುಡಿದು, ಉದ್ದವಾದ 'ಕ್ಯೂ'ನಲ್ಲಿ ನಿಂತೆವು. ಗರ್ಭಗುಡಿಯನ್ನು ತಲುಪಲು ಸುಮಾರು 2 ಗಂಟೆ ಕಾಲ ತೆಗೆದುಕೊಂಡಿತು. ದಾರಿಯುದ್ದಕ್ಕೂ ಕಾರ್ಪೆಟ್ ಹಾಸಿ, ಮೇಲೆ ನೆರಳು ಮಾಡಿದ್ದರು. ಹಾಗಾಗಿ ಬಿಸಿಲಿನ ಝಳ ತಾಕಲಿಲ್ಲ. ಮಂದಿರದ ಹಿಂದೆ ವಿಶಾಲವಾದ ಭೋಜನ ಶಾಲೆಯಲ್ಲಿ ಊಟದ ವ್ಯವಸ್ಥೆ ಇತ್ತು. ಅದಕ್ಕೂ ಹನುಮನ ಬಾಲದಂತ Q ರಜಾದಿನಗಳಾದ್ರಿಂದ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿದ್ದರು. ಅಂತೂ 1–1/2 ಗಂಟೆ ನಂತರ ಮೊದಲ ಮಹಡಿಯಲ್ಲಿದ್ದ ಊಟದ ಮನೆಗೆ ಪ್ರವೇಶ ಸಿಕ್ಕಿತು. ಪೂರಿ ಪಲ್ಯ, ದಾಲ್ ಭಾತ್, ಶಿರಾ, ಮಜ್ಜಿಗೆ ಪ್ರಸಾದ ತಿಂದು ರೂಮಿಗೆ ವಾಪಸಾದೆವು.

ಮಾರನೆದಿನ ಸುಮಾರು 150 ಎಕರೆ ಹರಡಿರುವ ಆನಂದಸಾಗರ್ ಎನ್ನುವ ಒಂದು ಉದ್ಯಾನಕ್ಕೆ ಹೋದೆವು. ಅದು ಮಂದಿರದಿಂದ 3 ಕಿ.ಮಿ. ದೂರದಲ್ಲಿದೆ. ಪ್ರವಾಸಿಗಳಿಗೆ ಮತ್ತು ಭಕ್ತರಿಗೆ ಆಧ್ಯಾತ್ಮ ಮತ್ತು ಮನರಂಜನೆಯನ್ನೂ ನೀಡುವ ಒಂದು ದೊಡ್ಡ ಉದ್ಯಾನ. ಮಂದಿರದ ಟ್ರಸ್ಟ್ ಇದರ ಸಂಪೂರ್ಣ ನಿರ್ವಹಣೆ ಮಾಡುತ್ತಿದೆ. ಸುಮಾರು ಮೂರುದಿನ ಮಕ್ಕಳೊಂದಿಗೆ ಸಂತೋಷವಾಗಿ ಕಳೆಯಬಲ್ಲ ಜಾಗ ಎಂದರೂ ತಪ್ಪಿಲ್ಲ. ಇದನ್ನು 2005ರಲ್ಲಿ ಸುಮಾರು 350 ಎಕರೆ ಜಾಗದಲ್ಲಿ ಧ್ಯಾನ ಮಂದಿರದ ಸುತ್ತ ನಿರ್ಮಿಸಲಾಗಿದೆ. ಇಲ್ಲಿ ಏನುಂಟು ಏನಿಲ್ಲ! ಪ್ರವೇಶದ್ವಾರದಲ್ಲೇ ಮಹಾರಾಷ್ಟ್ರದ ವೀರರ ಪ್ರತಿಮೆಗಳಿವೆ. ಒಂದು ಪುಟ್ಟ ರೈಲು ಮೈದಾನದ ಸುತ್ತ ಸುತ್ತಿ ಕಾಡಿನ ಪ್ರಾಣಿಗಳ ಪರಿಚಯ ಮಾಡಿಸುತ್ತದೆ. ಅಲ್ಲಿ ಓಡಾಡಲು ನಿಜವಾಗಲೂ ಕಾಲಿಗೆ ಶಕ್ತಿ ಬೇಕು. ಧ್ಯಾನ ಮಂದಿರಕ್ಕೆ ನಡೆದೇ ಹೋಗಬೇಕು. ಸುತ್ತಲಿನ ಪ್ರಕೃತಿ ಸೌಂದರ್ಯ ನೋಡುತ್ತಾ ಆಯಾಸ ಪರಿಹಾರ ಮಾಡಿಕೊಳ್ಳುತ್ತಾ ನಡೆದರೆ ಸಂಜೆ ಒಳಗೆ ಧ್ಯಾನ ಮಂದಿರ ತಲುಪಬಹುದು. ಅಲ್ಲಿಂದ ವಾಪಸ್ಸು ಬಂದು ಬೆಟ್ಟವನ್ನು ಅಗಲವಾಗಿ ಕೊರೆದು ಮಾಡಿದ ಬಯಲು ಪ್ರಾಂಗಣದಲ್ಲಿ ಕೂತು, ಕತ್ತಲಾದ ಮೇಲೆ ಕೊಳದಲ್ಲಿ ನಡೆಯುವ ರಂಗುರಂಗಿನ ಸಂಗೀತ ಕಾರಂಜಿ ಪ್ರದರ್ಶನ ನಿಜಕ್ಕೂ ಮರೆಯಲಾಗದ ಅನುಭವ. ಎಲ್ಲ ಮನ ತಣಿಯುವಂತೆ ನೋಡಿ ರೂಮಿಗೆ ವಾಪಸ್ಸಾದೆವು. ಮಾರನೆದಿನ ರೈಲು ಹತ್ತಿ ಡೊಂಬಿವಿಲಿ ತಲುಪಿದೆವು. ನಿಜವಾಗಲೂ ದೇಶ ಸುತ್ತಿದರೆ, ಹೊರಗಿನ ಪ್ರಪಂಚದ ಅರಿವಾಗುವುದು ಸಾಮಾನ್ಯವೇನಲ್ಲ. ●

---

## ಬಾವಿ

ಕಾಪಾಡುವ ಜವಾಬ್ದಾರಿ ನಿನ್ನದು" ಎಂದು ಒಪ್ಪಿಸಿ ಆಗಿದೆ.

ಅವನು "ಖಂಡಿತ" "ನಿನ್ನ ಎಷ್ಟು ಪ್ರೀತಿಯ ವಸ್ತುಗಳು ಇದರಲ್ಲಿವೇಂತ ನನಗೆ ಗೊತ್ತು". "ಇದು ಈಗಲೂ ನಿನ್ನ ಮನೇನೇ ಕಣೋ, ನಾ ಬೇರೆ ನೀ ಬೇರೆ ಏನೋ" ಎಂದು ಬೆನ್ನು ತಟ್ಟಿದಾಗ ಅವನ ಕಣ್ಣಂಚಿನಲ್ಲಿ ಕಂಡು ಬಂದ ಹನಿ ತನ್ನ ನಂಬಿಕೆ, ಅಕ್ಕರೆಯನ್ನು ಗಟ್ಟಿಯಾಗಿಸಿದ್ದುವು.

" ಅಪ್ಪ, ನಿಮ್ಮ ಸೀರಿಯಲ್ ಮುಗಿಯಿತಲ್ಲಾ, ಊಟಕ್ಕೆ ಏಳ್ತೀರಾ, ಇನ್ನೂ ಪ್ಯಾಕಿಂಗ್ ಕೂಡಾ ಮುಗಿದಿಲ್ಲ" ಎಂದು ಮಗ ಎಚ್ಚರಿಸಿದಾಗ, ಹೌದಲ್ಲಾ, ಎಲ್ಲೋ ಕಳೆದು ಹೋಗಿದ್ದೆ ಮುಂದೇನಾಯಿತೋ ಗೊತ್ತೇ ಆಗಲಿಲ್ಲ, ಏನೇನೋ ನೆನಪುಗಳು ಎಂದು ಕೊಳ್ಳುತ್ತಲೇ ಟಿವಿ ಆರಿಸಿ ರಾಮನಾಥ ಎದ್ದರು.

***

ಊಟ ಮುಗಿಸಿ ಸ್ವಲ್ಪ ಹೊತ್ತು ಹರಟೆ ಹೊಡೆದು ಎದ್ದು ಬಂದ ರಾಮನಾಥ ತನ್ನ ರೂಮಿನಲ್ಲಿ ಚದುರಿ ಬಿದ್ದಿದ್ದ ಬಟ್ಟೆಗಳೂ, ಪುಸ್ತಕಗಳು, ಅದು ಇದು ಎಲ್ಲಾ ಸೇರಿಸಿ ಸೂಟ್ಕೇಸಿನಲ್ಲಿ ತುರುಕಿದರು.ತನ್ನ ಟೇಬಲ್ ಮೇಲಿದ್ದ ತನ್ನ, ಶೀಲಾ ಕಪ್ಪು ಬಿಳುಪಿನ ಫೋಟೋ ಒಳಗಿಡಲು ಕೈಗೆತ್ತಿಕೊಂಡಾಗ ಒಳಗೆ ಬಂದ ಮಗ " ಅದು ಇಲ್ಲೇ ಇರಲಿ ಬಿಡಿ ಅಪ್ಪ " ಎಂದವನೇ ಅವರ ಮುಖ ಸ್ವಲ್ಪ ಪೆಚ್ಚಾದದ್ದು ಕಂಡು " ನೀವು ಮತ್ತೆ ಬೇಗನೇ ಬರುತ್ತೀರಲ್ಲಾ" ಎಂದು ಸೇರಿಸಿದ. ರಾಮನಾಥ ಏನು ಹೇಳಬೇಕೋ ತೋಚದೆ "ಇಲ್ಲ ಇಲ್ಲ. ಆಗ ಮತ್ತೊಂದು ಕಾಪಿ ಮಾಡಿಸಿ ತರ್ತೀನಿ ನಿನಗೋಸ್ಕರ" ಎಂದದ್ದನ್ನು ಕಂಡು ಮಗ ಹೆಚ್ಚಿನ ಚರ್ಚೆಗೆ ಹೋಗಲಿಲ್ಲ.

ಪಾಸ್ಪೋರ್ಟ್, ಹಣ, ಕಾರ್ಡುಗಳು, ಎಲ್ಲಾ ಜೋಪಾನವಾಗಿ ಇಟ್ಟುಕೊಂಡು ಎಲ್ಲಾ ಒಂದು ಸಲ ಚೆಕ್ ಮಾಡಿದಾಗ ತಾನೇನೂ ಮರೆತಿಲ್ಲ ಎಂದು ರಾಮನಾಥರಿಗೆ ಖಾತ್ರಿಯಾಯಿತು. ●

# ಐರೋಪ್ಯರ ಎದೆ ನಡುಗಿಸಿದ ಉಳ್ಳಾಲದ ವೀರರಾಣಿ ಅಬ್ಬಕ್ಕ

✍ ಪ್ರಕಾಶ್ ಮಲ್ಪೆ

ಸುಮಾರು 230 ವರ್ಷಗಳ ಕಾಲ ತಮ್ಮ ಸಾಮ್ರಾಜ್ಯದ ಚತುಃ ಸೀಮೆಯೊಳಗೆ ಯಾವ ಆಕ್ರಮಣಕಾರಿಯನ್ನೂ ಬರಗೊಡದೆ ಅಜೇಯವಾಗಿ ರಾಜ್ಯಭಾರ ನಡೆಸಿದ ವಿಜಯನಗರ ಸಾಮ್ರಾಜ್ಯ 1565 ರಕ್ಕಸ ತಂಗಡಿ ಯುದ್ಧದಲ್ಲಿ ಸೋಲೊಪ್ಪಿಕೊಂಡು ಪತನದ ಅಂಚಿನಲ್ಲಿತ್ತು. ವಿಜಯನಗರದ ಸಾಮರ್ಥ್ಯ ಕುಂದಿದೆ ಎಂದು ತಿಳಿಯುತ್ತಿದ್ದಂತೆ ಅಲ್ಲಿಯವರೆಗೆ ಬಾಲ ಮುದುರಿಕೊಂಡಿದ್ದ ಆಕ್ರಮಣಕಾರಿಗಳು ಮತ್ತೆ ಚಿಗುರಿದರು. ವ್ಯಾಪಾರಕ್ಕೆಂದು ಬಂದಿದ್ದ ಪೋರ್ಚುಗೀಸರು ಗೋವಾದಲ್ಲಿ ನೆಲೆಯೂರಿ ಕರ್ನಾಟಕದ ಕರಾವಳಿಯಲ್ಲಿ ಲೂಟಿ ಆರಂಭ ಮಾಡಿದರು. ಬಸ್ರೂರು, ಬಾರ್ಕೂರು, ಮಂಗಳೂರು ಸಹಿತವಾಗಿ ಕರಾವಳಿಯ ಬಂದರುಗಳನ್ನು ಸಂಪೂರ್ಣ ತಮ್ಮ 'ವಶಕ್ಕೆ ತೆಗೆದುಕೊಂಡರು. ತಮ್ಮನ್ನು ಒಪ್ಪದವರನ್ನು ಅತ್ಯಂತ ಕ್ರೂರವಾಗಿ ಹಿಂಸಿಸಿದರು. ಅಸಂಖ್ಯ ಅಂಗಡಿ, ಮನೆಗಳಿಗೆ, ತೆಂಗಿನ ತೋಟಗಳಿಗೆ ಬೆಂಕಿ ಇಟ್ಟರು. ಇಲ್ಲಿನ ತಾಮ್ರ, ಬೆಲೆ ಬಾಳುವ ಮಣಿಗಳು, ಪಾದರಸ, ಕರಿಮೆಣಸು ಏಲಕ್ಕಿ ಮುಂತಾದ ಸಾಂಬಾರ ಪದಾರ್ಥಗಳು ಎಲ್ಲವನ್ನೂ ಮನಸೋ ಇಚ್ಛೆ ದೋಚಿದರು. ಬಂದರಿನಲ್ಲಿದ್ದ ನಮ್ಮವರ ಹಡಗುಗಳನ್ನು ಮುಳುಗಿಸಿದರು. (ಸಮಕಾಲೀನ ಪೋರ್ಚುಗೀಸ್ ಇತಿಹಾಸಕಾರ ಕ್ಯಾಸ್ಟಾನಿಡಾ ಈ ಎಲ್ಲಾ ಘಟನೆಗಳನ್ನು ಸವಿವರವಾಗಿ ದಾಖಲಿಸಿದ್ದಾರೆ.) ಗೋವಾದಿಂದ ಉಳ್ಳಾಲದ ತನಕ ಕರಾವಳಿಯನ್ನು ಸಂಪೂರ್ಣವಾಗಿ ತಮ್ಮ ಹಿಡಿತದಲ್ಲಿರಿಸಿಕೊಂಡು, ಸಮುದ್ರದಲ್ಲಿನ ಯಾವುದೇ ಚಟುವಟಿಕೆಗೆ ಪೋರ್ಚುಗೀಸರಿಂದ ಅನುಮತಿ ಪಡೆಯಬೇಕಾದ ಅನಿವಾರ್ಯತೆ ನಮ್ಮವರದ್ದಾಯಿತು. ಉಳಿದ ಆಳರಸರು ಆಕ್ರಮಕರ ಕಾರ್ಯಗಳಿಗೆ ತಲೆಬಾಗಿ ಭಾರತೀಯರ ಮೇಲೆ ಅವರ ದೌರ್ಜನ್ಯಗಳನ್ನು ಕಂಡೂ ಕಾಣದಂತಿದ್ದು, ಕಾಲಕಾಲಕ್ಕೆ ಕಪ್ಪವನ್ನು ತಪ್ಪದೆ ನೀಡುತ್ತಾ ತೆಪ್ಪಗಿದ್ದ ಸಂದರ್ಭದಲ್ಲಿ, ಬೆಂಕಿಯ ಚೆಂಡಿನಂತೆ ಪೋರ್ಚುಗೀಸರ ಹಡಗುಗಳಿಗೆ ಬೆಂಕಿ ಹಚ್ಚಿ ಅಧರ್ಮಿಗಳ ಎದೆಯಲ್ಲಿ ನಡುಕ ಹುಟ್ಟಿಸಿದ ಭಾರತದ ಮೊದಲ ಸ್ವಾತಂತ್ರ್ಯ ಹೋರಾಟಗಾರ್ತಿ ಉಳ್ಳಾಲದ ವೀರರಾಣಿ ಅಬ್ಬಕ್ಕ.



15ನೇ ಶತಮಾನದವರೆಗೂ ಉತ್ತರದ ಅಂಕೋಲಾ ನದಿಯಿಂದ ದಕ್ಷಿಣದ ಕಾಸರಗೋಡಿನ ಪಯಸ್ವಿನಿ ನದಿಯ ತನಕ, ಸಮುದ್ರ ತಟದಿಂದ ಸಹ್ಯಾದ್ರಿ ಅಂಚಿನವರೆಗಿನ ಪ್ರದೇಶವನ್ನು ತುಳುನಾಡು ಎಂದೇ ಕರೆಯಲಾಗುತ್ತಿತ್ತು. ತನ್ನದೇ ಆದ ವೈಶಿಷ್ಟ್ಯ ಪೂರ್ಣ ರಾಜಕೀಯ, ಸಾಂಸ್ಕೃತಿಕ ಪರಂಪರೆಗಳಿದ್ದ ಪ್ರದೇಶ ಈ ತುಳುನಾಡು, "ಪುರುಷರು ಮಾತ್ರ ರಾಜ್ಯವಾಳಬೇಕಾದವರು, ಅಕಸ್ಮಾತ್ ಗಂಡು ಸಂತಾನವಿಲ್ಲದಿದ್ದರೆ ಆ ರಾಜ್ಯಕ್ಕೆ ಭವಿಷ್ಯವೇ ಇಲ್ಲ" ಅನ್ನುವ ಮಾನಸಿಕತೆಯಲ್ಲಿ ಯುರೋಪಿನಂತಹ ಮುಂದುವರಿದ ದೇಶಗಳಿದ್ದಾಗ, ಅಳಿಯ ಸಂತಾನ ಕಟ್ಟಿನ ಸಂಪ್ರದಾಯದಂತೆ ಸ್ತ್ರೀಯರಿಗೂ ಪಟ್ಟ ಕಟ್ಟಿ ಅವರ ಶೌರ್ಯವನ್ನು ಒರೆಗಲ್ಲಿಗೆ ಹಚ್ಚಿ, ಭಾರತೀಯ ನಾರಿಯರ ಪರಾಕ್ರಮವನ್ನು ಜಗತ್ತಿಗೆ ತಿಳಿಯಪಡಿಸಿದ ವಿಶಿಷ್ಟ ಸಂಪ್ರದಾಯ ತುಳುನಾಡಿನದ್ದು.

ಅಬ್ಬಕ್ಕ ತುಳುನಾಡನ್ನು ಆಳುತ್ತಿದ್ದ ಚೌಟ ವಂಶಕ್ಕೆ ಸೇರಿದವಳು. ಅಹಿಂಸಾ ಪರಮೋ ಧರ್ಮಃ ಎನ್ನುವ ಜೈನ ಮತವನ್ನು ಅನುಸರಿಸುವವಳಾಗಿದ್ದರೂ, ಧರ್ಮ ಹಿಂಸಾ ತಥೈವ ಚ ಎನ್ನುತ್ತಾ ರಾಷ್ಟ್ರ ರಕ್ಷಣೆಗಾಗಿ ಕತ್ತಿಯನ್ನು ಹಿಡಿದು ಭಾರತೀಯ ಸಂಸ್ಕೃತಿಯನ್ನು ಮೆರೆದವಳು. ಚೌಟರ ಅರಸು ಮನೆತನದಲ್ಲಿ ಅಬ್ಬಕ್ಕ ಹೆಸರಿನ ನಾಲ್ವರು ಆಳಿದ ದಾಖಲೆಗಳು ಇರುವುದರಿಂದ ಈಕೆಯನ್ನು ಹಿರಿಯ ಅಬ್ಬಕ್ಕಳೆಂದೇ ಇತಿಹಾಸಕಾರರು ಗುರುತಿಸುತ್ತಾರೆ. ಈಕೆ ಉಳ್ಳಾಲವನ್ನು ಆಳಿದ್ದು 1554ರಿಂದ 1588ರವರೆಗೆ. ಅಬ್ಬಕ್ಕ ಪಟ್ಟಕ್ಕೆ ಬರುವ ಮೊದಲೇ ಯುದ್ಧ ಕೌಶಲ್ಯಗಳು, ಆಡಳಿತ ತರಬೇತಿಯನ್ನು ಹೊಂದಿದ್ದಳು. ಜೊತೆಗೆ ಉತ್ತಮ ರೀತಿಯಲ್ಲಿ ಶಾಸ್ತ್ರಾಭ್ಯಾಸವನ್ನು ಕೂಡ ಮಾಡಿದ್ದಳು. ಮಾತ್ರವಲ್ಲದೆ ಸಂಗೀತ ಹಾಗೂ ಸಾಹಿತ್ಯಗಳಲ್ಲಿ ಅಬ್ಬಕ್ಕಳಿಗೆ ಅಪಾರ ಅಭಿರುಚಿ ಇತ್ತು ಎಂಬುದನ್ನು ಪೋರ್ಚುಗೀಸ್ ಇತಿಹಾಸಕಾರರು ತಮ್ಮ ಬರವಣಿಗೆಯಿಂದ ತಿಳಿಯಪಡಿಸುತ್ತಾರೆ. ಅರಬ್ಬರು, ಕಲ್ಲಿಕೋಟೆಯ ಸಾಮುದ್ರಿ ಅರಸ(ಜಾಮೋರಿನ್) ಮುಂತಾದವರ ಜೊತೆ ವ್ಯಾವಹಾರಿಕ ಒಪ್ಪಂದವನ್ನು ಮಾಡಿಕೊಂಡಿದ್ದ ರಾಣಿ ಅಬ್ಬಕ್ಕ ಆ ಕಾಲದಲ್ಲಿಯೇ ಸಾಗರೋತ್ತರ ವ್ಯವಹಾರಗಳನ್ನು ನಡೆಸಿದ್ದಳು. ಆದರೆ ಕರ್ನಾಟಕ ಕರಾವಳಿಯಲ್ಲಿ ನಮ್ಮ ಅಧಿಪತ್ಯವಿರುವುದರಿಂದ ನಮ್ಮ ಅನುಮತಿ ಇಲ್ಲದೆ ಉಳ್ಳಾಲದ ರಾಣಿ ನಡೆಸುತ್ತಿರುವ ವ್ಯವಹಾರ ಪೋರ್ಚುಗೀಸರನ್ನು ಕೆರಳಿಸಿತು. ಅಬ್ಬಕ್ಕಳಿಗೆ ಎಚ್ಚರಿಕೆ ನೀಡಿದರು. ಅವರ ಕಾನೂನೂಗಳಿಗೆ ಕ್ಯಾರೇ ಅನ್ನದ ಅಬ್ಬಕ್ಕ "ಬೆಳೆ ನನ್ನ ದೇಶದ್ದು, ಬೆಳೆದವರು ನನ್ನ ದೇಶದ ರೈತರು. ಸಮುದ್ರ ನನ್ನ ದೇಶದ್ದು. ಇಲ್ಲಿ ವ್ಯವಹಾರ ಮಾಡುವುದಕ್ಕೆ ಎಲ್ಲಿಂದಲೋ ಬಂದ ದರೋಡೆಕೋರರ

ಅನುಮತಿ ನಾನು ಪಡೆದುಕೊಳ್ಳಬೇಕೇ? ಸಾಧ್ಯವಿಲ್ಲ" ಎಂದು ದಿಟ್ಟತನದಿಂದ ಉತ್ತರ ನೀಡಿದಳು. ಪೋರ್ಚುಗೀಸರಿಂದ ಬರಬಹುದಾದ ಅಪಾಯವನ್ನು ತಡೆಗಟ್ಟಲು ಮತ್ತು ಅವರನ್ನು ಸಂಪೂರ್ಣ ಮಟ್ಟ ಹಾಕಲು ಅಬ್ಬಕ್ಕ ಸಂಪೂರ್ಣ ಸಿದ್ಧತೆಯನ್ನು ನಡೆಸಿದಳು. ಮೀನುಗಾರ ಸಮಾಜದ ಯುವಕರು ಅಬ್ಬಕ್ಕನ ಸೈನ್ಯವನ್ನು ಸೇರಿಕೊಳ್ಳುವುದು ಸಾಧ್ಯವಾಯಿತು. ಜೊತೆಗೆ ಕರಾವಳಿಯ ಬಿಲ್ಲವರು ಬಂಟರು ಮಾಪಿಳ್ಳೆಗಳು ಅಬ್ಬಕ್ಕನ ಸೈನ್ಯವನ್ನು ಸೇರಿ ಆಕೆಯ ಸೈನ್ಯದ ಶಕ್ತಿಯನ್ನು ಮತ್ತಷ್ಟು ಸಮರ್ಥವಾಗಿಸಿದ್ದರು.

ಪೋರ್ಚುಗೀಸರಿಂದ ಸಂಭಾವ್ಯವಾದ ದಾಳಿಯನ್ನು ಊಹಿಸಿದ ಅಬ್ಬಕ್ಕ ಉಳ್ಳಾಲದಲ್ಲಿ ಅಭೇದ್ಯವಾಗಿ ಕೋಟೆಯನ್ನು ಅದರ ಮೇಲೆ ಫಿರಂಗಿಗಳನ್ನು ಸನ್ನದ್ಧವಾಗಿರಿಸಿದ್ದಳು.ರಾಣಿ ಅಬ್ಬಕ್ಕ ಅಷ್ಟು ಸುಲಭದಲ್ಲಿ ಬಗ್ಗುವವಳಲ್ಲವೆಂದು ಮೊದಲೇ ಅರಿತಿದ್ದ ಆಗಿನ ಪೋರ್ಚುಗೀಸ್ ವೈಸರಾಯ್ 1955ರಲ್ಲಿ ತನ್ನ ಅತ್ಯಂತ ಸಮರ್ಥ ಅಡ್ಮಿರಲ್ ಡೋಮ್ ಅಲ್ವೇರೋಡ. ಸಿಲ್ವೇರ ನೇತೃತ್ವದಲ್ಲಿ 21 ಯುದ್ಧ ನೌಕೆಗಳನ್ನು ಮಂಗಳೂರಿಗೆ ಕಳುಹಿಸುತ್ತಾನೆ. ಆರಂಭವಾಯಿತು ಮಂಗಳುರಿನಲ್ಲಿ ಪೋರ್ಚುಗೀಸರಿಮ್ದ ನರಮೇಧ.

ಉಳ್ಳಾಲದ ಸೋಮೇಶ್ವರ ದೇವಸ್ಥಾನದ ಮೇಲೂ ಬರ್ಬರ ದಾಳಿಯಾಯಿತು. ಅಬ್ಬಕ್ಕ ತಡ ಮಾಡಲಿಲ್ಲ. ಪೋರ್ಚುಗೀಸರೇ ಬೆಚ್ಚಿಬೀಳುವಂತಹ ಪ್ರತ್ಯಘಾತಗಳು ಆರಂಭವಾದವು.

ತೆಂಗಿನ ಗರಿಗಳಿಂದ ತಯಾರು ಮಾಡಿದ ಸೂಟೆಗಳು (ದೊಂದಿಗಳು) ತೆಂಗಿನ ಗೆರಟೆಯೊಳಗೆ ಕೋವಿಯ ಮದ್ದನ್ನ ತುಂಬಿಸಿ ತಯಾರಿಸಿದ ಬಾಂಬುಗಳು, ಪುಂಖಾನುಪುಂಖವಾಗಿ ಬರುತ್ತಿದ್ದ ಬೆಂಕಿಯ ದಾಣಗಳಿಂದ, ಗೆರಟೆ ಬಾಂಬುಗಳಿಂದ ಪೋರ್ಚುಗೀಸರು ತತ್ತರಿಸಿ ಹೋದರು. ಅನೇಕರು ಪಾಣ ಕಳೆದುಕೊಂಡರು ಪ್ರಾಣ ಉಳಿಸಿಕೊಂಡವರ ಮುಖ ಮೂತಿಗಳು ಸುಟ್ಟುಹೋದವು. ಯುದ್ಧಕ್ಕೆ ಬಂದಿದ್ದ ಆ 21 ಹಡಗುಗಳು ಕೂಡ. – ಸಂಪೂರ್ಣ ಸುಟ್ಟು ಬೂದಿಯಾದವು. ಸಾಕಷ್ಟು ಸಾವು ನೋವುಗಳು ಆಗುತ್ತಿರುವುದನ್ನು ಕಂಡು ಕಲ್ಲಿಕೋಟೆಯ ದೊರೆ ಸಾಮುದ್ರಿ ಅರಸ ಮಧ್ಯಸ್ಥಿಕೆ ವಹಿಸಿ ಸಂಧಾನ ಮಾಡಿ ಯುದ್ಧವನ್ನು ನಿಲ್ಲಿಸಿದ.

ಅಬ್ಬಕ್ಕ ಮತ್ತವಳ ಸೈನ್ಯದ ವೀರಾವೇಶವನ್ನು ಜೀರ್ಣಿಸಿಕೊಳ್ಳಲು ಪೋರ್ಚುಗೀಸರಿಗೆ ಬರೋಬ್ಬರಿ ಎರಡು ವರ್ಷಗಳೇ ಬೇಕಾಯಿತು. ಆದರೆ ಹೊನ್ನು ಮಣ್ಣು ಮತ್ತು ಅಧಿಕಾರದ ಆಸೆಯಿಂದ ಮತ್ತೆ 1557ರಲ್ಲಿ ಮತ್ತೊಮ್ಮೆ ಕಾಲು ಕೆರೆದು ಯುದ್ಧಕ್ಕೆ ಬಂದರು. ಆಗ ಪೋರ್ಚುಗೀಸರ ಮುಂದಾಳುವಾಗಿದ್ದವನು ಲೂಯಿಸ್ ಡಿ ಮೆಲ್ಲೋ, ಪರಕೀಯರ ನೌಕೆಗಳು ಉಳ್ಳಾಲಕ್ಕೆ ಬಂದು ಮುಟ್ಟುವ ಮೊದಲೇ ಅಬ್ಬಕ್ಕನ ಸೈನ್ಯ ಮತ್ತು ಕರಾವಳಿಯ ಮೀನುಗಾರರು ಪ್ರಬಲ ಪ್ರತ್ಯಾಘಾತಗಳನ್ನು ಒಡ್ಡಿದರು. ಮುಂದೆ ನಡೆದ ಭೀಕರ ಯುದ್ಧದ ಪರಿಣಾಮ ಸಮುದ್ರದ ಮೂಲಕ ನೌಕೆಯಲ್ಲಿ ಬಂದ ಆಕ್ರಮಣಕಾರಿಗಳು "ಬದುಕಿದರೆ ಬಾಳು" ಎಂಬಂತೆ ರಸ್ತೆಗಳ ಮೂಲಕ ಗೋವಾಕ್ಕೆ ಪಲಾಯನ ಮಾಡಿದರು. ಮುಂದೆ ಹತ್ತು ವರ್ಷಗಳ ಕಾಲ ಉಳ್ಳಾಲದ ಕಡೆ ತಲೆಹಾಕಿಯೂ ಮಲಗಲಿಲ್ಲ ಪೋರ್ಚುಗೀಸರು.

ಮತ್ತೆ ಪ್ರಾರಂಭವಾಯಿತು ಅಬ್ಬಕ್ಕನ ಅಜೇಯ ರಾಜ್ಯಭಾರ. ಒಂದೆಡೆ ಪೋರ್ಚುಗೀಸರಿಗೆ ಸಲ್ಲುತ್ತಿದ್ದ ಕಪ್ಪಕ್ಕೂ ಕಲ್ಲು ಬಿತ್ತು, ಮತ್ತೊಂದೆಡೆ ಅವರ ವೈರಿ ಕಲ್ಲಿಕೋಟೆಯ ದೊರೆ ಸಾಮುದ್ರಿ ಅರಸನ ಜೊತೆಗೆ ರಾಜಕೀಯ ಸಖ್ಯವನ್ನು ಬೆಳೆಸಿಕೊಂಡು ಅವನ ಹಡಗುಗಳ ಜೊತೆ ಪರ್ಷಿಯಾ, ಅರಬ್ ಮುಂತಾದ ದೇಶಗಳ ಜೊತೆ ವ್ಯಾಪಾರ ವ್ಯವಹಾರವನ್ನು ಪುನರಾರಂಭಿಸಿದಳು. ಭಾರತದ ಪಶ್ಚಿಮ ಸಮುದ್ರದಲ್ಲಿ ವ್ಯವಹಾರಕ್ಕೆ ಪೋರ್ಚುಗೀಸರು ವಿಧಿಸಿದ್ದ ಕರ್ತಾಜ್ (Cartaz) ಸಮುದ್ರ ವ್ಯವಹಾರಗಳ ತೆರಿಗೆ)ಗೆ ಕವಡೆಕಿಮ್ಮತ್ತಿನ ಬೆಲೆಯೂ ಇಲ್ಲದಾಯಿತು. ಮತ್ತೆ ಬಂದರು ದಂಡೆತ್ತಿ ಪೋರ್ಚುಗೀಸರು, ಆ ಮೂರನೇ ಕದನದಲ್ಲಿ ಪೋರ್ಚುಗೀಸರ ಸೇನಾಧಿಕಾರಿಯಾಗಿದ್ದವ ಜಾವೋ ಪಿಕ್ಸಿವೋಟೋ. ರಾಣಿ ಅಬ್ಬಕ್ಕ ಎದೆ ಕವಚವನ್ನು ಧರಿಸಿ ಬಿಳಿ ಕುಮರೆಯ ಮೇಲೆ ಕುಳಿತು. ಸೈನಿಕರಲ್ಲಿ ಯುದ್ಧೋತ್ಸಾಹವನ್ನು ತುಂಬುತ್ತಿದ್ದ ರೀತಿಯನ್ನು ಪೋರ್ಚುಗೀಸ್ ಇತಿಹಾಸಕಾರರಾದ ಕೂಟೊ ಮತ್ತು ಫ್ರಾನ್ಸಿಕೋ ಬಹಳವಾಗಿ ಮೆಚ್ಚಿ ದಾಖಲಿಸುತ್ತಾರೆ. ಪೋರ್ಚುಗೀಸ್ ಸೈನಿಕರು ಉಳ್ಳಾಲವನ್ನು ಆಕ್ರಮಿಸಿದರು. ಕಂಡ ಕಂಡವರನ್ನು ಸುಟ್ಟರು. ಊರಿಗೆ ಬೆಂಕಿ ಇಟ್ಟರು. ಕ್ರೂರವಾಗಿ ಜನರನ್ನು ಹಿಂಸಿಸ ತೊಡಗಿದರು. ಈ ನಡುವೆ 'ಉಳ್ಳಾಲದ ಕ್ರೈಸ್ತ ಜೆಸ್ಯೂಟ್ ಪಾದ್ರಿಗಳು ಶಿಲುಬೆ . ಹಿಡಿದುಕೊಂಡು ಪೋರ್ಚುಗೀಸ್ ಸೈನಿಕರಿಗೆ ಯುದ್ಧ ನಡೆಸುವಂತೆ ಪ್ರೋತ್ಸಾಹಿಸುತ್ತಿದ್ದರು' ಎಂಬ ಕರಾಳ ಸತ್ಯವನ್ನು ಖ್ಯಾತ ಇತಿಹಾಸಜ್ಞರಾದ ಡಾ.ಕೆ.ಜಿ. ವಸಂತ ಮಾಧವ ಅವರು ಅಬ್ಬಕ್ಕನ ಕುರಿತಾದ ತಮ್ಮ ಯೋಧನಾ ಗ್ರಂಥದಲ್ಲಿ ಅನಾವರಣಗೊಳಿಸುತ್ತಾರೆ.

ಅಬ್ಬಕ್ಕ ಮತ್ತವಳ ಸೈನಿಕರು ಪೋರ್ಚುಗೀಸರಿಗೆ ಬಹಳ ಪ್ರಬಲವಾದ ಪ್ರತಿರೋಧವನ್ನು ತೋರಿದರು. ಅಪಾರವಾದ ಸಾವು ನೋವುಗಳು ಉಳ್ಳಾಲದಲ್ಲಿ ಸಂಭವಿಸುತ್ತಿರುವುದನ್ನು ಕಂಡು ಅಬ್ಬಕ್ಕ ಯುದ್ಧ ತಂತ್ರದ ಭಾಗವಾಗಿ ತನ್ನ ಸೈನಿಕರ ಜೊತೆ ಅಲ್ಲಿಂದ ತಪ್ಪಿಸಿಕೊಂಡು ಪಕ್ಕದ ಬೆಟ್ಟಗಳಲ್ಲಿ ತಲೆಮರಿಸಿಕೊಂಡಳು. ಇತ್ತ ಅಬ್ಬಕ್ಕ ಓಡಿ ಹೋದಳೆಂದು ಪೋರ್ಚುಗೀಸ್ ಸೈನಿಕರು ವಿಜಯೋನ್ಮಾದದಿಂದ ಕಂಠಪೂರ್ತಿ ಕುಡಿದು ತೂರಾಡುತ್ತಿದ್ದಾಗ ರಾತ್ರಿಯ ಹೊತ್ತು ಇದ್ದಕ್ಕಿದ್ದಂತೆ ಅಬ್ಬಕ್ಕ ತನ್ನ ಸೈನಿಕರೊಂದಿಗೆ ಸಿಂಹಿಣಿಯಂತೆ ದಾಳಿ ನಡೆಸುತ್ತಾಳೆ.' ಸೇನಾಧಿಕಾರಿ ಜಾವೋ ಪಿಕ್ಸಿವೋಟೋ ಅಬ್ಬಕ್ಕನ ಅಬ್ಬರಕ್ಕೆ ಸಿಲುಕಿ ಇಹಲೋಕವನ್ನೇ ತ್ಯಜಿಸುತ್ತಾನೆ. ತಮ್ಮ ಸೇನಾಧಿಕಾರಿಯನ್ನು ಬರ್ಬರವಾಗಿ ಯಮಪುರಿಗಟ್ಟಿದ ಸುದ್ದಿ ತಿಳಿಯುತ್ತಿದ್ದಂತೆ ಪೋರ್ಚುಗೀಸ್ ಸೈನಿಕರು ಅರ್ಧ ದಾರಿಯಲ್ಲಿ ತಮ್ಮ ನೌಕೆಗಳನ್ನು ಗೋವೆಯತ್ತ ತಿರುಗಿಸಿ ಓಡಿದರು. ಅಸಂಖ್ಯ ಪೋರ್ಚುಗೀಸ ಸೈನಿಕರು ಸತ್ತು ಬಿದ್ದರು, ಬದುಕಿ ಉಳಿದವರು ಕಂಗಾಲಾಗಿ ವೈರಿಗಳು ಯಾರು ಎಂದು ತಿಳಿಯಲಾಗದೆ ತಮ್ಮವರಿಗೇ ಗುಂಡು ಹಾರಿಸಿಕೊಂಡರು.



# PUZZLES & TEASERS

I. **NAME THE COUNTRY FROM THE LANDMARK**

1. TIMES SQUARE
2. STONEHENGE
3. MOUNT KILIMANJARO
4. CHRIST THE REDEEMER
5. GREAT BARRIER REEF
6. PETRONUS TWIN TOWERS
7. BURJ KHALIFA
8. BIG BEN
9. KREMLIN
10. GARDEN BY THYE BAY

II. **GUESS THE NAME OF THE MOVIE**

1. BASANTI IN KUTHO KE SAMANE MUCH NACHANA
2. BABU MOSHAIR ZINDAGI BADI HONE CHAHIHE LAMBI NAHI
3. ABHI KE LIYE HAI KAL SUBHA PANVEL NIKHAL NA HAI
4. TAARIK PAY TAARIK TAARIK PAY TAARIK
5. MOCAMBO KHUSH HUWA

III. **GUESS THE IDIOMS**

1. LET THE CAT OUT OF THE ……….
2. BLACK ………..
3. NEVER JUDGE THE BOOK BY ITS ……………..
4. BREAK A …………….


7. TOUGH NUT TO………………
6. ACTION SPEAKS LOUDER THAN ……………..
7. SPILL THE……………………..
8. ON CLOUD……………………..

IV. **UNSCRAMBLE THESE BRANDS**

1. PAPLE
2. YONS
3. LIENT
4. ANSGUMS
5. ZOMANA

V. **IDENTIFY INDIAN SWEETS BY EMOJIS**


A





B




C





D




VI. WHAT IS THIS PUZZLE SAYING

A




B




## PUZZLES & TEASERS ANSWERS

I. **WORD PUZZLES**:1). GOLD FISH, 2). ALPHABET, 3). CUPCAKE, 4) A PLANT, 5). SHADOW, 6). THEY ARE SAME, 7). FENCE

II. **FIND THE WORD:** A). TOP SECRET, B). OVERDUE.

III. **GUESS THE SWEET**: I). KESARI, II). MILKCAKE, III). KAJU KATL,

IV. **UNSCRAMBLE THE BRAND**: 1). COCACOLA, 2). ASIAN PAINTS, 3). CADBURRY, 4). PEPSI, 5). RAYMOND, 6). NIRMA, 7). THUMBS UP, 8). DOMINOS PIZZA, 8). NESCAFE, 10). NIKE.

V. **UNSCRAMBLE THE COLOURS:** 1). BURGUNDY, 2). LAVANDER, 3). CYAN, 4). COLAR, 5). MAGENTA, 6). TURQUOISE, 7). LILAC, 8).IVORY.

*Compiled by: Mr Ananth Banwasi*

# SOME EXAMPLES OF VERSES FROM BHAGAVAD GITA THAT ARE POWERFUL OR BEAUTIFUL?

**✍ Dhanush Dhari Misra**

There are so many verses that are powerful and beautiful; but none equal the understanding of the whole book.

In 1969, when I was 25 years old, a friend could persuade me to thoroughly read Gita and try my best to live my life accordingly. He could convince me from his own example that it was to be treated as an advice to a soldier on the battlefield and not as a religious book.

I started reading Gita along with Mahabharat and Upanishads, for about an hour daily.

It was not easy. I had to get up by 4 am and by 4.30 am settle down with Gita (in original Sanskrith with translation in Hindi) along with a book of Mahabharat (generally the English book by Rajagopalachari) and a few of the Upanishads (in original Sanskrith with Hindi translations by Vinoba Bhave). I read three to four slokas daily along with the paraphrase and translation. In a few cases I did not like the translation given in the book and made my own translation. I referred to Mahabharat whenever I had doubt about the context and referred to the Upanishads (in original Sanskrit) for elaboration of some of the teachings.

I try to follow the teachings of Gita as best as I can.

On a few days I continued to read Mahabharat or an Upanishad only without reading any sloka of Gita.

By devoting at least one hour daily on 4 to 5 days in a week it took me nearly two years to complete one thorough reading of the 700 stanzas distributed in the 18 chapters along with the relevant portions of Mahabharata and the Upanishads.

Later in 1977 AD when I became a member of the faculty (in an IIT) to my dismay I found that many academically bright students suffered from this syndrome of indecision and procrastination. They could not concentrate on their studies. The solution which had worked for me, worked for hundreds of the students in the IITs as they devoted time for thorough and critical study of Shrimad Bhagavad Geetha. I had found (and it worked for most of the students) that the best way is to regularly devote at least one hour daily before 6 am to systematically read a few stanzas of Geetha along with Mahabharat to understand the context and the Upanishads to understand the teachings.Some students completed the thorough study within a few months by devoting two to three hours daily in addition to almost the whole day(s) at the weekend.

Most of the students substantially improved their grades in the institute and prospered in their careers. Almost all of them gave up any bad habit they had such as alcoholic drinks, drugs, smoking etc.

A few students in IITs are not able to complete the course within the limited number of years permitted and have to leave the institute without any degree or diploma. Among them those who had studied Gita could overcome the trauma of losing so many years at the prime of their life and could settle for other rewarding careers.

I must add that while hundreds of students could read and follow Gita as stated above, many more did not bother to heed to our advice or gave up reading Gita after a few days. Those who could continue regularly without break for a month or so generally completed the whole course.

For myself, after the first complete systematic reading of Gita, I started reading the scriptures of the other religions, especially the Abrahamic religions. Then I realised that

**सर्वोपनिषदो गावो दोग्धा गोपालनन्दनः।**

**पार्थो वत्सः सुधीर्भोक्ता दुग्धं गीतामृतं महत्।।**

**सर्वोपनिषदो include खृश्टोपनिषद् and आल्लोपनिषद्**

Views of some great men on Gita.

Henry David Thoreau: The noted American poet, author, and philosopher, was deeply influenced by Indian philosophy and spiritual thought. In his noted book titled Walden, he referenced the Bhagwad Gita in many instances. One of his statements:

"In the morning, I bathe my intellect in the stupendous and cosmogonic philosophy of the Bhagavad Gita in comparison with which our modern world and its literature seem puny and trivial."

Hermann Graf Keyserling: The German Philosopher regarded Gita as "Perhaps the most beautiful work of the literature of the world."

Hermann Hesse: The German Swiss novelist, poet and painter felt that "the marvel of the Bhagavad-Gita is its truly beautiful revelation of life's wisdom which enables philosophy to blossom into religion."

Ralph Waldo Emerson: The popular American essayist, lecturer, and poet of the mid-19th century has said this

about the Bhagavad Gita: "I owed a magnificent day to the Bhagavad-Gita. It was as if an empire spoke to us, nothing small or unworthy, but large, serene, consistent, the voice of an old intelligence which in another age and climate had pondered and thus disposed of the same questions which exercise us."

Wilhelm von Humboldt: The philosopher and linguist pronounced the Gita as: "The most beautiful, perhaps the only true philosophical song existing in any known tongue ... perhaps the deepest and loftiest thing the world has to show."

Bulent Ecevit: Turkish Ex-prime minister was asked what had given him the courage to send Turkish troops to Cyprus. His answer was "He was fortified by the Bhagavad Gita which taught that if one were morally right, one need not hesitate to fight injustice"

Lord Warren Hastings: The first governor general of British India wrote: "I hesitate not to pronounce the Gita a performance of great originality, of sublimity of conception, reasoning and diction almost unequalled; and a single exception, amongst all the known religions of mankind."

Sunita Williams: The American astronaut who holds the record for longest single space flight by a woman carried a copy of Bhagavad Gita and Upanishads with her to space, said

"Those are spiritual things to reflect upon yourself, life, world around you and see things other way, I thought it was quite appropriate" while talking about her time in space.

J. Robert Oppenheimer: The American theoretical physicist, Oppenheimer is known as the father of the atomic bomb and was involved in the atomic bombings of Hiroshima and Nagasaki, in Japan, during the second World War. He was known to gift its English translation to his friends and others. Oppenheimer learned Sanskrit in 1933 and read the Gita in the original language. He had remarked that while witnessing the first atomic bombing, he was reminded of the words from the Bhagavad Gita, where Krishna persuades Arjuna to do his duty. He said:

"Now I am become Death, the destroyer of worlds."

Annie Besant: The Irish socialist, Theosophist, and women's rights activist, who supported Indian home-rule during the struggle for independence has said,

"That the spiritual man need not be a recluse, that union with the divine Life may be achieved and maintained in the midst of worldly affairs, that the obstacles to that union lie not outside us but within us—such is the central lesson of the Bhagavad-Gita."

T. S Eliot: Indian philosophy had a huge influence on this American poet, who had studied Indian philosophy and Sanskrit during his days in Harvard, from 1911 to 1914. In his poem titled The Dry Salvages, Eliot mentions the conversation between Krishna-Arjuna, from the Bhagavad Gita, to depict a connection between the past and the future, and to emphasize that one needs to follow divine will, rather than seek personal gains. As the famous lines from his poem reads:

"You who came to port, and you whose bodies will suffer the trial and judgement of the sea, or whatever event, this is your real destination. So, Krishna, as when he admonished Arjuna on the field of battle. Not fare well, but fare forward, voyagers."

Rudolf Steiner

"If we want to approach such a creation as sublime as the Bhagavad-Gita with full understanding it is necessary for us to attune our souls to it."

E. Sreedharan: The Metro man has said, "You see, spirituality has no religious overtones. The essence of spirituality is to make a person pure in his mind and his thoughts. When I started reading our old scriptures, like the "Bhagavad Gita," I found it was useful for day-to-day life, so I started practicing it. I consider it an administrative gospel, one that will help you in doing things like running an organization".

A. P. J. Abdul Kalam: The 11th President of India, despite being a Muslim, used to read Bhagavad Gita and recite mantras.

Narendra D Modi: Prime Minister of India, has strongly pitched the Bhagavad Gita as "India's biggest gift to the world". Shri Modi gifted the book "Bhagavad Gita according to Gandhi" to the then President of the United States Barrack Obama in 2014 during his US visit.

Will Smith: The Hollywood actor has said "I am 90% through the Bhagavad Gita... My inner Arjun is being channelled."

Mahatma Gandhi: The Bhagavad Gita's emphasis on selfless service was a prime source of inspiration for Gandhi. He has said-

"When doubts haunt me, when disappointments stare me in the face, and I see not one ray of hope on the horizon, I turn to Bhagavad-Gita and find a verse to comfort me; and I immediately begin to smile in the midst of overwhelming sorrow. Those who meditate on the Gita will derive fresh joy and new meanings from it every day"

## ಮೈಸೂರು ಅಸೋಸಿಯೇಷನ್, ಮುಂಬಯಿ


## The Mysore Association, Bombay

*The Event is marked with Musical Presentation by the Winners.*

# The Mysore Association Bombay
# Centenary Celebrations 2025

*Eminent Dancer, Vidwan Dr. Priya Ganesh from Bangalore has designed and choreographed a new dance composition on the Evolution of music through dance form. This Presentation has attracted many scholars from all the corners of the world.*

**The Mysore Association is proud to present this unique programme for members as a special event during our Centenary Celebrations.**



# "SANGEETA SAMRUDHI"

## "THE EVOLUTION OF MUSIC"



On Sunday
25th May 2025
at 6.00 p.m.
onwards.

**Venue:**
Mysore Association's Auditorium
393, Bhau Daji Road, Matunga (Central), Mumbai - 400 019.

*Do not Miss this Unique Dance Presentation*

# ಮೈಸೂರು ಅಸೋಸಿಯೇಷನ್, ಮುಂಬಯಿ

# The Mysore Association, Bombay

393, Bhau Daji Road, Matunga, Mumbai - 400 019. Tel: ( 022 ) 2403 7063
Website: www.mysoreassociation.in E-mail: mysoreassociation.mumbai@gmail.com

## ಮೈಸೂರು ಅಸೋಸಿಯೇಷನ್ ನೂರರ ನಲಿವು 1926-2026

ಮೇ 06, 2025

## ನೇಸರು ಜಾಗತಿಕ ಶಿಶುಕವನ ರಚನಾ ಸ್ಪರ್ಧೆ-2025

# ಶತಮಾನೋತ್ಸವ ಪ್ರಶಸ್ತಿ

ಮೈಸೂರು ಅಸೋಸಿಯೇಷನ್, ಮುಂಬೈ ಒಂದು ಪ್ರತಿಷ್ಠಿತ ಕನ್ನಡ ಸಂಸ್ಥೆಯಾಗಿದ್ದು, ತನ್ನ ಶತಕವನ್ನು ಪೂರೈಸುವತ್ತ ಮುಂದುವರಿಯುತ್ತಿದೆ. ಈ ಮೊದಲೂ ಕೂಡಾ ಕನ್ನಡ ಕವನ, ಕಥೆ ಹಾಗೂ ಏಕಾಂಕ ನಾಟಕ ಸ್ಪರ್ಧೆಯನ್ನು ಆಯೋಜಿಸುತ್ತಲೇ ಬಂದಿದೆ. ಇದರ ಮುಂದುವರಿದ ಭಾಗವಾಗಿ **"ಶತಮಾನೋತ್ಸವ ವಿಶೇಷ" ಜಾಗತಿಕ ಶಿಶುಕವನ ರಚನಾ ಸ್ಪರ್ಧೆ**ಯ ಘೋಷಣೆಯನ್ನು ಈ ಮೂಲಕ ಮಾಡಲಾಗುತ್ತಿದೆ. ಈ ಸ್ಪರ್ಧೆಯಲ್ಲಿ ವಿಶ್ವದಾದ್ಯಂತ ಆಸಕ್ತರೆಲ್ಲರೂ ಭಾಗವಹಿಸಬಹುದು. ಇಲ್ಲಿ ಯಾವುದೇ ಪ್ರವೇಶ ಶುಲ್ಕವಿರುವುದಿಲ್ಲ. ಶಿಶು ಕವನವು **3ರಿಂದ 10 ವರ್ಷದ ಮಕ್ಕಳನ್ನು** ರಂಜಿಸಿ, ಅವರ ಆಸಕ್ತಿಯನ್ನು ಹಿಡಿದಿಟ್ಟುಕೊಳ್ಳುವಂತಿರಬೇಕು.

### ಶಿಶು ಕವನ ರಚನಾ ಸ್ಪರ್ಧೆ

| | | |
|---|---|---|
| ಪ್ರಥಮ ಬಹುಮಾನ | - | ರೂ. 15,000/- |
| ದ್ವಿತೀಯ ಬಹುಮಾನ | - | ರೂ. 10,000/- |
| ತೃತೀಯ ಬಹುಮಾನ | - | ರೂ. 5,000/- |
| ಮೆಚ್ಚುಗೆಯ ಬಹುಮಾನ (ಇಬ್ಬರಿಗೆ) ತಲಾ | | ರೂ. 2,000/- |

### ಸ್ಪರ್ಧೆಯ ನಿಯಮಾವಳಿಗಳು:

- ಶಿಶು ಕವನವು ಕನ್ನಡದಲ್ಲಿದ್ದು, ಸ್ವರಚಿತವಾಗಿರಬೇಕು, ಅನುವಾದ ಅನುಕರಣೆ ಆಗಿರಕೂಡದು.
- ಸ್ಪರ್ಧೆಗೆ ಕಳುಹಿಸಿದ ಕವನಗಳು ಬೇರೆಲ್ಲೂ ಪ್ರಕಟವಾಗಿರಬಾರದು.
- ಒಬ್ಬ ವ್ಯಕ್ತಿಯು ಒಂದಕ್ಕಿಂತ ಹೆಚ್ಚು ಕವನವನ್ನು ಕಳುಹಿಸುವಂತಿಲ್ಲ.
- ಸ್ಪರ್ಧೆಗೆ ಬಂದ ಕವನವನ್ನು ಮರಳಿಸಲಾಗುವುದಿಲ್ಲ.
- ಕವನವು 1 ಪುಟವನ್ನು ಮೀರಬಾರದು.
- ಕಾಗದದ ಒಂದೇ ಮಗ್ಗುಲಲ್ಲಿ ಚಿತ್ತಿಲ್ಲದಂತೆ ಬರೆದಂತಹ ಅಥವಾ ಕಂಪ್ಯೂಟರ್ ಮುದ್ರಿತ ಬರಹವನ್ನು ಅಂಚೆ ಅಥವಾ ಕೆಳಗೆ ತಿಳಿಸಿದ ಇ-ಮೇಲ್‌ಗೆ ಕಳುಹಿಸಬಹುದು.
  **kavana.nesaru@gmail.com**
- ಕವಿಯ ಹೆಸರು, ವಿಳಾಸ, ಜನ್ಮ ದಿನಾಂಕ, ಮೊಬೈಲ್ ಸಂಖ್ಯೆ ಹಾಗೂ ಇಮೇಲ್ ಪ್ರತ್ಯೇಕ ಪುಟದಲ್ಲಿ ಬರೆದಿರಬೇಕು.
- ತೀರ್ಪುಗಾರರ ತೀರ್ಮಾನವೇ ಅಂತಿಮ. ಇದರ ಬಗ್ಗೆ ಯಾವ ಚರ್ಚೆ ಅಥವಾ ಪತ್ರ ವ್ಯವಹಾರ ಇಲ್ಲ.
- ಕವನವು ನಮ್ಮ ಕೈ ಸೇರುವ ಕೊನೆಯ ದಿನಾಂಕ: **ಜುಲೈ 30, 2025**
- ಆಯ್ಕೆಯಾದ, ಕವನಗಳನ್ನು ನಮ್ಮ ಮೈಸೂರು ಅಸೋಸಿಯೇಷನ್ನಿನ ಮುಖವಾಣಿ 'ನೇಸರು'ವಿನಲ್ಲಿ ಕಾಲಕಾಲಕ್ಕೆ ಪ್ರಕಟಿಸುವ ಹಕ್ಕು ಮೈಸೂರು ಅಸೋಸಿಯೇಷನ್ ಕಾದಿರಿಸಿದೆ.
- ಆರಿಸಿದ 50ರಿಂದ 100 ಉತ್ತಮ ಶಿಶು ಕವನಗಳನ್ನು, ಶತಮಾನೋತ್ಸವದ ನೆನಪಿನಲ್ಲಿ, ಪುಸ್ತಕ ರೂಪದಲ್ಲಿ ಹೊರತರುವ ಯೋಜನೆಯಿದೆ.
- ನಮ್ಮ ಈ ಸ್ಪರ್ಧೆಗೆ ಕವನಗಳನ್ನು ಕಳಿಸುವ ಪ್ರತಿಯೊಬ್ಬರೂ ಈ ಸ್ಪರ್ಧೆಯ ನಿಯಮಾವಳಿಗಳಿಗೆ ಬದ್ಧರಾಗಿರುತ್ತಾರೆ.

**Postal Address:**

**The Mysore Association, Bombay**
393, Bhau Daji Road, Matunga (Central), Mumbai - 400 019.
Tel. : 022 - 2403 7065 (M) : 83697 88157 (ಬೆಳಿಗ್ಗೆ 11.00 ರಿಂದ ಸಂಜೆ 7.00 ಘಂಟೆಯವರೆಗೆ)

Edited by Dr. Jyothi Satish, Printed & Published by Hon. Secretary, The Mysore Association Bombay, Mumbai - 400019. Tel: 2403 7065
Email : mysoreassociation.mumbai@gmail.com Website: www.mysoreassociation.in Printed by Aarati Art Printers, Fort, Mumbai - 1 Mob.: 98201 60077